ಪಂಚಭಾಷಿ
ಪುಷ್ಪಮಾಲಾ

પંચભાષી
પુષ્પમાળા

श्रीमद् राजचन्द्रजी कृत

# पंचभाषी पुष्पमाला

# Panchabhashi Pushpamala

by Srimad Rajchandraji

পংচভাষী পুষ্পমালা

बीत चुकी है रात, आया है प्रभात, मुक्त हुए है निद्रा से ।
प्रयत्न करें (अब) भाव-निद्रा को टालने का ।

*

दीर्घ, संक्षिप्त या क्रमानुक्रम किसी भी स्वरूप में मेरे द्वारा कही गई, पवित्रता के पुष्पों से आवृत्त (गूँथी हुई) इस माला का प्रभात या संध्या के समय अथवा अन्य अनुकूल निवृत्ति में चिंतन मनन करने से मंगलदायक होगा । विशेष क्या कहुँ ?

*

"आप की आत्मा का इससे कल्याण हो, आप को ज्ञान, शांति तथा आनंद प्राप्त हो, आप परोपकारी, दयावान, ज्ञानवान, क्षमावान, विवेकशील एवं बुद्धिमान बनें ऐसी शुभयाचना अर्हत् भगवान के पास करते हुए इस पुष्पमाला को पूर्ण करता हूँ ।"

*- श्रीमद् राजचन्द्रजी*

# ಪಂಚಭಾಷಿ ಪುಷ್ಪಮಾಲಾ

(ಪ್ರತಿದಿನದ ಬಂಗಾರದ ಗುಲಾಬಿ ನುಡಿಮುತ್ತುಗಳು
ಐದು ಭಾಷೆಗಳಲ್ಲಿ)

- ಗುಜರಾತಿ - ಹಿಂದಿ - ಇಂಗ್ಲೀಷ್ - ಕನ್ನಡ - ಬಂಗಾಳಿ -


## ಶ್ರೀಮದ್ ರಾಜಚಂದ್ರಜೀ

ಮುನ್ನುಡಿ :
ಸಾಧ್ವಿ ವಿಶಾಲ ನಂದಿನಿಶ್ರೀಜಿ
ಸಾಧ್ವಿ ರಾಜನಂದಿನಿಶ್ರೀಜಿ

ಕನ್ನಡ ಅನುವಾದ :
ಶ್ರೀಮತಿ ಪುಷ್ಪಾಬಾಯಿ ಸ್ವಯಂಶಕ್ತಿ
ಕುಮಾರಿ ಗೀತಾಂಜಲಿ ಶಂಕರ್‌ರಾವ್ ಜೈನ್
ಶ್ರೀ ಕೆ. ಆರ್. ಕಾಮತ್

ಕನ್ನಡ ಪರಿಷ್ಕರಣೆ :
ಶ್ರೀ ಎ. ಚಂದ್ರ ಪ್ರಕಾಶ್

ಮುಖ್ಯ ಪರಿಷ್ಕರಣಾಕಾರರು :
ಪ್ರೊ. ಪ್ರತಾಪ್ ಕುಮಾರ್ ಜೆ. ಟೋಲಿಯಾ
ಶ್ರೀಮತಿ ಸುಮಿತ್ರಾ ಆರ್. ಟೋಲಿಯಾ



ಜಿನಾ ಭಾರತಿ
ವರ್ಧಮಾನ್ ಭಾರತಿ ಇಂಟರ್‌ನ್ಯಾಷನಲ್ ಫೌಂಡೇಷನ್
ಪ್ರಭಾತ್ ಕಾಂಪ್ಲೆಕ್ಸ್, ಕೆ.ಜಿ. ರಸ್ತೆ, ಬೆಂಗಳೂರು - 560 009. (ಭಾರತ)

ಪಂಚಭಾಷಿ ಪುಷ್ಪಮಾಲಾ (ಗುಜರಾತಿ, ಹಿಂದಿ, ಇಂಗ್ಲೀಷ್, ಕನ್ನಡ, ಆಂಗ್ಲ)
ಆಧ್ಯಾತ್ಮಿಕ
ಮೂಲ ಬರವಣಿಗೆ : ಶ್ರೀಮದ್ ರಾಜಚಂದ್ರಜೀ

ಸಂಪಾದಕರು :
ಪ್ರೊ. ಪ್ರತಾಪ್ ಕುಮಾರ್ ಜೆ. ಟೋಲಿಯಾ
ಶ್ರೀಮತಿ ಸುಮಿತ್ರ ಪಿ. ಟೋಲಿಯಾ

ಪ್ರಕಾಶಕರು : ಜೀನಾ ಭಾರತಿ
ವರ್ಧಮಾನ್ ಭಾರತಿ ಇಂಟರ್‌ನ್ಯಾಷನಲ್ ಫೌಂಡೇಷನ್
ಪ್ರಭಾತ್ ಕಾಂಪ್ಲೆಕ್ಸ್, ಕೆ.ಜಿ. ರಸ್ತೆ, ಬೆಂಗಳೂರು - 560 009. (ಭಾರತ)

ಹಕ್ಕುಗಳು : ಜೀನಾ ಭಾರತಿ, ಆದರೆ ಸೇವಾ ಭಾವನೆಯುಳ್ಳ ಸಂಘಗಳು ಮತ್ತು ವ್ಯಕ್ತಿಗಳು, ಪ್ರಕಾಶಕರಿಂದ ಲಿಖಿತವಾಗಿ ಮರುಮುದ್ರಣದ ಹಕ್ಕುಗಳನ್ನು ಪಡೆದು ಉಚಿತವಾಗಿ ಮುದ್ರಿಸಬಹುದು.

ಮುದ್ರಣ : 2010

ಪ್ರತಿಗಳು : 1000

ಬೆಲೆ : ಒಂದು ಭಾಷೆಯ ಪ್ರತಿ ಒಂದಕ್ಕೆ ಮುಖ ಬೆಲೆ ರೂ. 9-00
ಮಾರಾಟ ಬೆಲೆ ರೂ. 5-00
ಐದು ಭಾಷೆಯ ಒಂದು ಪುಸ್ತಕದ ಮುಖ ಬೆಲೆ ರೂ. 54-00
ಮಾರಾಟ ಬೆಲೆ ರೂ. 36-00

ISBN No.81-901341-3

# ಮುನ್ನುಡಿ

ಜೈನ ಧರ್ಮದಲ್ಲಿ ಮುಖ್ಯವಾಗಿ 45 ಬಗೆಯ ಗ್ರಂಥಗಳಿವೆ. ಇವುಗಳಲ್ಲಿ ಮೊದಲನೆಯದಾಗಿ ಆಚಾರಾಂಗ ಸೂತ್ರವಿದೆ. ಇದರಲ್ಲಿ ಪರಮಾತ್ಮ ತೀರ್ಥಂಕರ ಮಹಾವೀರ ದೇವನು ಸಾಧಕರ ಜೀವನದಲ್ಲಿ ಏನು ಮಾಡಬೇಕು ? ಏನು ಮಾಡಬಾರದು ? ಏನು ತಿನ್ನಬೇಕು ? ಏನು ತಿನ್ನಬಾರದು ? ಹೇಗೆ ಜೀವಿಸಬೇಕು ? ಹೇಗೆ ಜೀವಿಸಬಾರದು ? ಯಾವ ಪ್ರವೃತ್ತಿಯನ್ನು ಮಾಡಬೇಕು ? ಯಾವ ಪ್ರವೃತ್ತಿಯನ್ನು ಮಾಡಬಾರದು ? ಏನು ಮಾಡುವುದರಿಂದ ಆರಾಧಕನಾಗುತ್ತಾನೆ ? ಏನು ಮಾಡುವುದರಿಂದ ವಿರಾಧಕನಾಗುತ್ತಾನೆ ? ಏನು ಮಾಡುವುದರಿಂದ ಕರ್ಮವು ಆತ್ಮಕ್ಕೆ ಅಂಟುವುದು? ಏನು ಮಾಡುವುದರಿಂದ ಕರ್ಮರಹಿತನಾಗುವುದು. **आज्ञाराद्धा विराद्धा च शिवाय च भवाय च आश्रवो भवहेतु स्यात् संवरो मोक्ष कारणम्** ಯಾವುದನ್ನು ಬಿಡಬೇಕು ಯಾವುದನ್ನು ಸ್ವೀಕಾರಮಾಡಬೇಕು ಎಂಬುದನ್ನು ಬಹಳ ಸೂಕ್ಷ್ಮವಾಗಿ ತಿಳಿಸಿಕೊಟ್ಟಿದ್ದಾರೆ.

ಈ ಪರಮಾತ್ಮ ಮಹಾವೀರ ದೇವನ ಆಗಮದ ವಚನಗಳನ್ನು ಶ್ರೀಮದಜೀಯವರು ತಮ್ಮ ಪುಷ್ಪಮಾಲಾ ಗ್ರಂಥದಲ್ಲಿ ಅತ್ಯಂತ ಸುಂದರ ಶೈಲಿಯಲ್ಲಿ ನಿರೂಪಣೆಗೊಳಿಸಿದ್ದಾರೆ. ಹತ್ತು ವರ್ಷದ ಲಘು ವಯಸ್ಸಿನಲ್ಲಿಯೇ ಧರ್ಮದ ಸಿದ್ಧಾಂತದ ಮಾತುಗಳನ್ನು ಹೇಳಬೇಕೆಂದರೆ ಪೂರ್ವ ಜನ್ಮದ ಸಂಸ್ಕಾರವೇ ಕಾರಣ. ಇಲ್ಲದಿದ್ದರೆ ಅಷ್ಟು ಸಣ್ಣ ವಯಸ್ಸಿನಲ್ಲಿ ಬುದ್ಧಿ ಬೆಳೆದಿರುವುದಿಲ್ಲ.

ಅವರು ಬರೆದಿರುವಂತಹ ಈ ಪುಷ್ಪಮಾಲಾ ಗ್ರಂಥವು ಅಬಾಲವೃದ್ಧ ಎಲ್ಲಾ ತರಹದ ಜನರಿಗೂ ಅತ್ಯಂತ ಉಪಯೋಗಿಯಾಗಿದೆ. ಈ ಗ್ರಂಥದ ಚಿಂತನ ಮನನದಿಂದ ಪ್ರತಿಯೊಬ್ಬರು ತಮ್ಮ ಜೀವನವನ್ನು ಸುಂದರಗೊಳಿಸಿಕೊಳ್ಳಲಿ ಎಂಬುದೇ ಆಶಯ.

ಬೆಂಗಳೂರು
**19-01-2009.**

ಸಾಧ್ವಿ ವಿಶಾಲ ನಂದಿನಿಶ್ರೀಜಿ
ಸಾಧ್ವಿ ರಾಜನಂದಿನಿಶ್ರೀಜಿ

# ಸಂಪಾದಕೀಯ

## ಪಂಚಭಾಷಿ ಪುಷ್ಪಮಾಲೆ

### ಅತ್ಯುಚ್ಚ ಸಾಕ್ಷಾತ್ಕಾರ ಪಡೆದ ದಿವ್ಯಾತ್ಮ ಒಂದರ ಕೊಡುಗೆ ಇದು.

ಶ್ರೀಮದ್ ರಾಜಚಂದ್ರಜೀಯವರು ತಮ್ಮ ಹತ್ತನೇ ವರುಷದ ವಯಸ್ಸಿನಲ್ಲೇ ಪೋಣಿಸಿದ ಈ ದಿವ್ಯ, ಪವಿತ್ರ, ಪರಮಶ್ರೇಷ್ಟ ಜ್ಞಾನಪುಷ್ಪಗಳ ಸರಮಾಲೆಯು, ಪೂರ್ವಜನ್ಮದ ಅರಿವಿನ ಒಂದು ನಿಚ್ಚಳ ದಾಖಲೆಯಾಗಿದೆ.

ಹಲವು ಜನ್ಮಗಳ ಸಂಚಿತ, ಅದ್ವಿತೀಯ, ಅಭಿವ್ಯಕ್ತ, ಜ್ಞಾನಾಮೃತ ಧಾರೆಯ ಹಾಗೂ ನಿಷ್ಕಳಂಕ, ನಿರ್ಮಲ, ಅತಿ ಸುಂದರ ದಿವ್ಯ ಜೀವನದ ಫಲವೇ ಈ ತಿಳುವಳಿಕೆ ಮತ್ತು ಪೂರ್ವಜನ್ಮದ ಜಾತಿಸ್ಮೃತಿಜ್ಞಾನ. ಚಿಕ್ಕವರಿಂದ ದೊಡ್ಡವರತನಕ ಅನಕ್ಷರಸ್ಥರಿಂದ ಮೇಧಾವಿಗಳತನಕ, ಬಡವರಿಂದ ಸಿರಿವಂತರ ತನಕ, ಬೈರಾಗಿಗಳಿಂದ ಸಂಸಾರಿಗಳ ತನಕ, ಪ್ರತಿಯೊಬ್ಬರಿಗೂ ದಿನ ನಿತ್ಯವೂ ಬೆಳಗಿನಿಂದ ಸಂಜೆಯವರೆಗೆ, ಈ ಪುಷ್ಪ ಮಾಲೆಯು ಒಂದು ಅಮೋಘವಾದ ಪ್ರಾಯೋಗಿಕ ಮಾರ್ಗದರ್ಶನ ನೀಡುತ್ತದೆ. ತಮ್ಮ 8ನೇ ವಯಸ್ಸಿನಲ್ಲೂ ಗೀತೆಗಳನ್ನು ಬರೆಯುತ್ತಿದ್ದ ಶ್ರೀಯವರು, 10ನೇ ವರ್ಷದಲ್ಲಿ ಬರೆದ ಈ ರಚನೆಯು ಅತ್ಯದ್ಭುತವಾಗಿದೆ. ತಮ್ಮ ಏಳನೆಯ ವಯಸ್ಸಿನಲ್ಲೇ ಮೂಡಿತ್ತು ಹಿಂದೆ ಹೇಳಿದ ಅವರ ''ಜಾತಿಸ್ಮೃತಿ ಜ್ಞಾನ''.

ನಿಜವಾಗಿಯೂ ಇದು ಪ್ರತಿಯೊಬ್ಬರಿಗೂ ಅವರ ಪ್ರಾಯೋಗಿಕ, ನೈತಿಕ, ಸಾಮಾಜಿಕ, ಧಾರ್ಮಿಕ ಬದುಕಿನ ನಿತ್ಯ-ಮಾರ್ಗದರ್ಶಿಯಾಗಿದೆ.

ಪ್ರಸಕ್ತ ಸುವರ್ಣ ವರ್ತಮಾನದ ಕೈಜಾರುವ ಪ್ರತಿ ಕ್ಷಣಗಳ ಗಣನೆ ಹಾಗೂ ಅವುಗಳ ಹಿಡಿತಕ್ಕೆ ಬೇಕಾದ ವಿಧಿನಿಯಮಗಳು ಇಲ್ಲಿವೆ. ಭೂತಕಾಲದ ಆತ್ಮಪರಿಶೀಲನೆ, ವರ್ತಮಾನದ ಸುಧಾರಿತ ಉಪಯೋಗ, ಹೊಳೆಯುವಂತಹ ದಿವ್ಯ ಭವಿಷ್ಯ ಎಲ್ಲವೂ ಲಭ್ಯ. ಗತಕಾಲದ್ದು ಉಳಿಯದು, ಮುಂದಿನ ಭವಿಷ್ಯವೂ ಮಾಯ, ಪ್ರಸ್ತುತ ಮಾತ್ರ ಉಳಿಯುವುದು. ವರ್ತಮಾನದ ಬದುಕು ಮಾತ್ರವೇ ಈಗ ನಮ್ಮ ಮುಂದಿರುವುದು.

ಮುಂಜಾವಿನ ಬೆಳಕಲ್ಲಿ ಕಳೆದ ಕತ್ತಲ ರಾತ್ರಿಯ ಪರದೆಯನ್ನು ಕಿತ್ತೊಗೆದು ಜಾಗ್ರತಿಯ ನುಡಿಗಳನ್ನು ಆಡುವಾಗ, ತನ್ನ ಪುಷ್ಪಗುಚ್ಛಗಳಿಂದ ಆಯ್ದ ಒಂದು ಹೂವನ್ನು ನೀಡುತ್ತ ಎಂತಹ ಅದ್ಭುತ ಅಮೃತದಂತಹ ಮಾರ್ಗದರ್ಶನವನ್ನು ಪ್ರಸ್ತುತ ಪಡಿಸುತ್ತಾರೆ. ''ರಾತ್ರಿ ಕಳೆದು ಹೋಗಿದೆ, ದಿವ್ಯ ಪ್ರಭಾತವು ಮೂಡಿದೆ. ನಿದ್ರಾವಸ್ಥೆಯಿಂದ ನಿನಗೆ ಬಿಡುಗಡೆಯಾಗಿದೆ. ದೀರ್ಘಕಾಲದ ಅಜ್ಞಾನದ ಸುಪ್ತಾವಸ್ಥೆಯನ್ನು ಹೊಡೆದೋಡಿಸು.'' ಅನಂತರ ಒಂದರ ಹಿಂದೆ ಒಂದರಂತೆ ದಿವ್ಯಪುಷ್ಪಗಳು ದಿನವಿಡೀ ಹರಡಿ ಬೆಳಗಿಂದ ಸಂಜೆಯವರೆಗೆ, ಪ್ರತಿಯೊಬ್ಬರಿಗಾಗಿ, ಹೊರಡುತ್ತಿರುತ್ತವೆ.

ಅದ್ಭುತವಾಗಿ ಹೇಳಲ್ಪಟ್ಟ ಮತ್ತು ದೈನಂದಿನ ಮಾರ್ಗದರ್ಶಕ ಕಾರ್ಯಸೂಚಿಯು ಪವಿತ್ರ ಯಶಸ್ವೀ ಪ್ರತಿದಿನದ ಆಚರಣೆಗಾಗಿ ಬೇರೆಲ್ಲಿ ನಮಗೆ ಸಿಗಲು ಸಾಧ್ಯ ?''

ಈ ದಿವ್ಯ ಕುಸುಮಗಳ ಶಾಶ್ವತ ಸುಗಂಧವು ಅನೇಕ ಜನರ, (ಈ ಲೇಖಕನ ಸಹಿತ) ಬದುಕಿನಲ್ಲಿ ಬೆಳಕು ತುಂಬಿದೆ. ಈ ಪುಷ್ಪಗುಚ್ಛವು, ಈ ಹೂಮಾಲೆಯು, ಜನಸಾಮಾನ್ಯರ ಬದುಕನ್ನು ಬದಲಾಗಿಸಿ, ಅವರನ್ನು ಸಂತಸವಾಗಿರಿಸಿ ಧನ್ಯರನ್ನಾಗಿಸಿ, ಸುಖಿಗಳನ್ನಾಗಿಸುವಲ್ಲಿ ಅತ್ಯುತ್ಕೃಷ್ಟ ಶಕ್ತಿಯುಳ್ಳದ್ದಾಗಿದೆ.

ಶ್ರೀಮದ್ ರಾಜಚಂದ್ರಜೀಯವರ ಈ ಪುಷ್ಪಮಾಲೆಯನ್ನು ಅವರ ಮೊತ್ತಮೊದಲ ಕೃತಿಯಾಗಿಯೂ ಪರಿಗಣಿಸಲಾಗುತ್ತಿದೆ. ಅದರ ಪ್ರಭಾವವೇ ಅವರ ಇತರ ರಚನೆಗಳ ಮೇಲೆ ಆಗಿರುವುದು ಕಾಣುತ್ತದೆ. ಜೀವನವನ್ನು ಮೇಲೆತ್ತಿ ಆತ್ಮವನ್ನೂ ಬಡಿದೆಬ್ಬಿಸುವ ಭವ್ಯರಚನೆಗಳಾದ ''ಭಾವನಬೊಧ-ಮೋಕ್ಷಮಾಲಾ'', ''ವಚನಾಮೃತ'' ಮತ್ತು ''ಆತ್ಮಸಿದ್ಧಿಶಾಸ್ತ್ರ'' - ಇದಕ್ಕೆ ಸಾಕ್ಷಿಯಾಗಿವೆ.

ಆದುದರಿಂದ ಈ ಎಲ್ಲಾ ಉಪಯುಕ್ತ ರಚನೆಗಳು ಎಲ್ಲರಿಗೂ ಎಲ್ಲೆಲ್ಲೂ ತಲುಪಬೇಕು. ಗುಜರಾತು ಮಾತ್ರವಲ್ಲ ದೇಶದಲ್ಲೆಲ್ಲಾ ಹಾಗೂ ಜಗತ್ತಿನೆಲ್ಲೆಡೆಗಳಲ್ಲೂ, ಪ್ರತಿ ಮೂಲೆ ಮೂಲೆಗಳಲ್ಲೂ ಪ್ರತಿ ಭಾಷೆಗಳಲ್ಲೂ ಪ್ರತಿಧ್ವನಿಸುವಂತೆ ತಲುಪಿ

ಅವು ಮೊಳಗುವಂತಾಗಬೇಕು. ಸೂರ್ಯಕಿರಣಗಳು ಬೀಳದ ಜಾಗದಲ್ಲೂ ಅವು ಸೇರಬೇಕು. ಇದರಲ್ಲಿ ದಾರಿತಪ್ಪಿದವರಿಗೆ ಸರಿದಾರಿ ತೋರಬಲ್ಲ, ಅಶಾಂತ ಜೀವಗಳಿಗೆ, ದುಃಖಿ ಪ್ರಪಂಚಕ್ಕೆ ಶಾಶ್ವತ ಶಾಂತಿ, ಸುಖಗಳನ್ನು ಕೊಡಬಲ್ಲ ಭವ್ಯಸೌಧದ ಪ್ರವೇಶದ್ವಾರದ ಪ್ರಭಾವಯುಕ್ತ ಚತುರ ಚಾವಿ ಇದೆ. ಇವು ಈ ಕಾಲದ ಬಲ್ಲವರ ಅಭಿಪ್ರಾಯ ಮತ್ತು ಭಾವನೆಗಳು ಈ ಅತೀಗಾಢ ರಚನೆಗಳ ಬಗ್ಗೆ.

ಮೂಲ ಗುಜರಾತಿಯಲ್ಲಿರುವ ಮತ್ತು ಹಿಂದಿ ವ್ಯಾಖ್ಯಾನದೊಂದಿಗೆ, 36 ವರ್ಷಗಳ ಹಿಂದೆ 1974ರಲ್ಲಿ ಹೊರಬಂದ ಶ್ರೀಮದ್‌ಜೀಯವರ ಅಮರಕೃತಿ - ಆತ್ಮಜಾಗೃತಿಯ ಮೇರು ಶೃಂಗ ''ಶ್ರೀ ಆತ್ಮಸಿದ್ಧಿಶಾಸ್ತ್ರ'' ವು ಸಂಗೀತ ಪ್ರಧಾನವಾಗಿದ್ದು ಅಂದು ದಾಖಲಿಸಿಕೊಂಡು ಜಗತ್ತಿಗೆ ಪ್ರಸ್ತುತ ಪಡಿಸಲಾಯಿತು. ಇಂದು ನಮಗೆ ಇದು ಸಿಗುತ್ತಿರುವುದು ನಮ್ಮ ಸೌಭಾಗ್ಯ. ಕರುಣಾಳು ಶ್ರೀಮದ್‌ಜೀಯವರ ಹಾಗೂ ಇಂದಿನ ಹಲವಾರು ಮಹಾ ದೃಷ್ಟಾರರ ದೈವೀಪ್ರೇರಣೆಯಿಂದ, ಈ ಕೃತಿಯ (ಆತ್ಮಸಿದ್ಧಿ) ಸಪ್ತಭಾಷಿಕ ಪುಸ್ತಕ ರೂಪ (ಸಪ್ತಭಾಷಿ ಆತ್ಮಸಿದ್ಧಿ ) ವನ್ನು ಹೊರತರಲು ಇಂದು ಕಾರಣೀಭೂತರಾಗಿ ನಾವು ಅದೃಷ್ಟ ಪಡೆದಿದ್ದೇವೆ. ಮೂಲ ಗುಜರಾತಿ ಬರಹದ ಪದ್ಯ ಕೃತಿಯ ತರ್ಜುಮೆಯನ್ನು ಇದರಲ್ಲಿ ಸಂಕಲಿಸಿ ಪ್ರಕಟಿಸಿದ್ದೇವೆ.

ಅತೀ ಮಹತ್ತರವಾದ ಮತ್ತು ಬೃಹತ್ತಾದ ಪ್ರೇರಣೆ ಹಾಗೂ ಸ್ಫೂರ್ತಿಯನ್ನು ನೀಡಿ ಶ್ರೀ ಮದ್‌ಜೀಯವರ ಈ ಆತ್ಮಸಿದ್ಧಿ ಹಾಗೂ ಇತರ ಬರಹಗಳನ್ನು ಭಾಷಾಂತರಿಸಿ - ಪ್ರಚಾರ ನೀಡಿ, ಪ್ರಪಂಚದಾದ್ಯಂತಕ್ಕೂ ಪಸರಿಸುವಲ್ಲಿ ಅತೀ ಹೆಚ್ಚಿನ ಪ್ರೋತ್ಸಾಹವನ್ನು ನಮಗೆ ನೀಡಿದವರು ಶ್ರೀಮದ್ ರಾಜೆಂದ್ರ ಆಶ್ರಮ ಹಂಪಿ, ಕರ್ನಾಟಕ, ಇದರ ಸ್ಥಾಪಕರಾದ ಪೂಜ್ಯ ಶ್ರೀ ಸಹಜಾನಂದ ಘಂಜಿ (ಭದ್ರ ಮುನಿ)ಯವರು.

ಈ ''ಸಪ್ತ ಭಾಷಿ ಆತ್ಮಸಿದ್ಧಿ'' ಯ ಸಂಕಲನ ಮತ್ತು ಪ್ರಕಾಶನದ ಈ ಮಹಾ ಕಾರ್ಯವು ಶ್ರೀ ಸಹಜಾನಂದಜೀಯವರ ಅಕಾಲಿಕ ಅಗಲಿಕೆಯಿಂದ, ಅರ್ಧದಲ್ಲಿ ನಿಂತು ಹೋದರೂ, ವಿದೂಷಿ ಸುಶ್ರೀ ವಿಮಲಾ ಥಾಕರ್ ಅವರ ಎಲಾ ತರಹದ

ಸಹಾಯ ಸಹಕಾರ ಹಾಗೂ ಮಾರ್ಗದರ್ಶನದಲ್ಲಿ ಕೊನೆಗೆ ಪೂರ್ತಿಗೊಳಿಸಿದೆವು. ಅವರು ಬಹು ಅಮೂಲ್ಯವಾದ ಮುನ್ನುಡಿಯನ್ನು ಸಹ ನೀಡಿ ''ಸಪ್ತ ಭಾಷಿ ಆತ್ಮಸಿದ್ಧಿ'' ಗೆ ನೆರವಾದರು. ದೀದಿ ವಿಮಲಾಜೀಯವರು ಪ್ರೀತಿ, ಸಮರ್ಪಣಾಭಾವ ಹಾಗೂ ಕಾರ್ಯ ತತ್ಪರತೆಯನ್ನು ಶ್ರೀಮದ್ ರಾಜಚಂದ್ರಜೀಯವರ ಬಗ್ಗೆ ಇರಿಸಿಕೊಂಡಿರುವುದು ಎಲ್ಲರಿಗೂ ವಿದಿತವಾದುದು. ಅವರು ಪ್ರಕಾಶನಗೊಳಿಸಿದ ಶ್ರೀಮದ್‌ಜೀಯವರ ಪ್ರವಚನಗಳ ಗ್ರಂಥ ''ಮೌನ ಯೋಗ'' (ಅಪ್ರಮದ ಯೋಗ) ಶ್ರೀಮದ್‌ಜೀಯವರನ್ನು ಯಥಾವತ್ತಾಗಿ ಅರಿತುಕೊಳ್ಳುವಲ್ಲಿ ಒಂದು ಮೈಲುಗಲ್ಲಾಗಿದೆ.

ಬಹಳ ವರ್ಷಗಳ ಹಿಂದೆಯೇ ''ಶ್ರೀಮದ್ ರಾಜಚಂದ್ರಜೀಯವರ ಆಯ್ದ ಸಂಗ್ರಹಗಳು'' ಎನ್ನುವ ಒಂದು ಉಪಯುಕ್ತ ಯೋಜನೆಯ ರೂಪರೇಷೆಯನ್ನು ದೀದಿ ವಿಮಲಾಜಿಯವರ ಜತೆ ಹಾಕಿ ಕೊಂಡಿದ್ದೇವು. ಆದರೆ ಕೆಲವು ಅಹಿತಕರ ಘಟನೆ ಹಾಗೂ ಜಡತೆಯಿಂದಾಗಿ ಹಾಗೂ ನಮ್ಮ ಅನೇಕ ಇತರ ಚಟುವಟಿಕೆಗಳಿಂದಾಗಿ, ಅದು ಕಾಗದದಲ್ಲೇ ಉಳಿದುಕೊಂಡಿತು. ಆದರೂ ಈ ನಡುವೆ ಶ್ರೀಮದ್‌ಜಿಯವರ ಸಣ್ಣ ಹೊತ್ತಿಗೆಗಳು ಹಾಗೂ ಕಿರು ಪುಸ್ತಕಗಳನ್ನೂ, ಡಿಸ್ಕಗಳನ್ನು ಪ್ರಕಾಶನಗೊಳಿಸಿ ಜನಸಮಾನ್ಯರ ಕಲ್ಯಾಣಕ್ಕಾಗಿ ದೀದಿ ವಿಮಲಾಜಿ ಹಾಗೂ ಗುರುದೇವ ಸಹಜಾನಂದ ಘಂಜಿಯವರ ವಿಸ್ತೃತ ಯೋಜನೆಗನುಗುಣವಾಗಿ ತಯಾರಿಸಿದ್ದು, ಇವು ಇಂದಿನ ಬೇಡಿಕೆಗೆ ಉಪಯುಕ್ತವಾದುದು ಕಂಡು ಬಂದಿದೆ.

ಈ ಎಲ್ಲವನ್ನೂ ಗಮನದಲ್ಲಿಟ್ಟು ಶ್ರೀಮದ್‌ಜೀಯವರ ''ಪುಷ್ಪಮಾಲೆ'' ದಾರೀದೀಪವಾಗಿ ಜನಸಾಮಾನ್ಯರ ಜೀವನ ಪಾವಿತ್ರ್ಯತೆಗಾಗಿ, ಭಾಷಾಂತರಗೊಂಡು ಪ್ರಕಾಶನಗೊಳ್ಳುತ್ತಿದೆ. ಅತೀ ಹೆಚ್ಚಿನ ಪ್ರಮಾಣದಲ್ಲಿ ಮನಃ ಪರಿವರ್ತನೆ ಮಾಡಬಲ್ಲ ಈ ಕೃತಿಯು ಹಿಂದೆ, ಹೇಳಿದಂತೆ, ಸರಳ, ಪವಿತ್ರ , ಶಾಂತಿಯುಕ್ತ , ಮುಗ್ಧ ಜೀವನಶೈಲಿಯ ಶಿಕ್ಷಣ ನೀಡಬಲ್ಲ ಒಂದು ಪುಟ್ಟ ಹೊತ್ತಿಗೆಯಾಗಿದೆ.

ಮೊಟ್ಟ ಮೊದಲು ಇದನ್ನು 5 ಭಾಷೆಗಳಲ್ಲಿ

ಪ್ರಸ್ತುತಗೊಳಿಸಲಾಗುತ್ತಿದೆ. ಪಶ್ಚಿಮ, ಪೂರ್ವ, ದಕ್ಷಿಣ ಹಾಗೂ ಉತ್ತರ ಭಾರತದ ಮತ್ತು ಅಂತರಾಷ್ಟ್ರೀಯ ಸಂಬಂಧ ಭಾಷೆಗಳಾದ ಮೂಲ ಗುಜರಾತಿ, ಬಂಗಾಳಿ, ಕನ್ನಡ, ಹಿಂದಿ ಹಾಗೂ ಇಂಗ್ಲೀಷ್‌ನಲ್ಲಿ ಕ್ರಮವಾಗಿ ನೀಡಲಾಗುವುದು.

ಶ್ರೀಮದ್‌ಜೀ ಸಹಜಾನಂದ ಘಂಜಿಯವರ ಕರುಣಾ ಕಟಾಕ್ಷ ಹಾಗೂ ಯೋಗಬಲ - ಶಕ್ತಿಗಳು ನಮಗೆ ಮಾರ್ಗದರ್ಶನದ ಪ್ರಬಲಶಕ್ತಿಯಾಗಿವೆ. ಇದರ ಮತ್ತು ಇತರ ಕೆಲಸಗಳ ಸಾಧನೆಗಾಗಿ ನಮಗೆ ಸುಶ್ರೀ ವಿಮಲಾ ಥಾಕರ್ ಅವರ ನಿತ್ಯಮಾರ್ಗದರ್ಶನ ಹಾಗೂ ಆಶೀರ್ವಾದ, ಶಾಶ್ವತ ದೊರಕುತ್ತಿರುವುದು ನಮ್ಮ ಸೌಭಾಗ್ಯ. ಅನೇಕ ವಿದ್ವಾಂಸರ, ಸಂತರ ಸಹಮತಿಯೂ ಸಹ ನಮಗೆ ಸಿಗುತ್ತಿದೆ. ತನ್ನ ಕಷ್ಟಾರ್ಜಿತ ಹಣ ಹಾಗೂ ಉಳಿತಾಯವನ್ನು ಕಾಣಿಕೆ ನೀಡಿ ನಮ್ಮ ದೊಡ್ಡ ಆರ್ಥಿಕ ಹೊರೆಯನ್ನು ಇಳಿಸಿದ ಮಹಾನುಭಾವರೊಬ್ಬರು ನಮಗೆ ದೊರಕಿದ್ದಾರೆ. ಅವರು ವಿನಯಪೂರ್ವಕವಾಗಿ ಅನಾಮಧೇಯರಾಗಿ ಉಳಿದು ಕೊಳ್ಳಲು ಇಚ್ಚಿಸಿದುದರಿಂದ ಅವರ ಹೆಸರನ್ನು ಹೇಳದೇ ಇರಬೇಕಾಗಿದೆ.

ಶ್ರೀಮದ್‌ಜೀವಯರ ಯೋಗಬಲ ಅನುಗ್ರಹದಿಂದ, ಈ ಸಣ್ಣ ಪುಸ್ತಿಕೆ ಪುಷ್ಪಮಾಲೆಯು ಅತ್ಯಂತ ಯಶಸ್ವಿಯಾಗಿ ಬಹಳ ಮಂದಿಗೆ ಬೇಕಾಗಿ ಹೆಚ್ಚಿನ ಪ್ರಸಾರವಾಗುವುದೆಂದು ನಮಗೆ ಭರವಸೆಯಿದೆ. ಸತ್ ಪುರುಷಾರ್ಥದ ಕಾರ್ಯಕ್ರಮಗಳು ಸನ್ಮಾರ್ಗದ ಪ್ರೇರಕಗಳಾದುದರಿಂದಲೂ, ಈ ಬಗ್ಗೆ ನಮಗೆ ಪೂರ್ತಿ ನಂಬಿಕೆಯಿದೆ. ಗುರುದೇವ ರಬೀಂದ್ರನಾಥ ಠಾಗೋರರ ''ಗೀತಾಂಜಲಿ'' ಮತ್ತು ಆಚಾರ್ಯ ವಿನೋಬಾ ಭಾವೆಯವರ ''ಗೀತಾ ಪ್ರವಚನ'' ದಂತಹ ಅಮರ ಕೃತಿಗಳು ತಮ್ಮ ಸಂದೇಶವನ್ನು ಅಸಂಖ್ಯಾತ ಭಾಷೆಗಳಲ್ಲಿ ಭಾರತದಲ್ಲಿ ಮಾತ್ರವಲ್ಲ ವಿದೇಶಗಳಲ್ಲೂ ಸಾರಬಲ್ಲವು ಎಂದಾದರೆ, ಶ್ರೀಮದ್‌ಜೀಯವರ ವಿಶ್ವೋಪಯುಕ್ತ ಸಾಹಿತ್ಯದ ಮಧುರ ಸುಗಂಧವು ಪ್ರಪಂಚದ ಎಲ್ಲಾ ಭಾಷೆಗಳಲ್ಲಿ ಹರಿದು ಯಾಕೆ ಪಸರಿಸಬಾರದು ? ಈ ದಿಸೆಯಲ್ಲಿ ನಮ್ಮ ಪ್ರಕಾಶನದ ''ಸಪ್ತಭಾಷಿ ಆತ್ಮ ಸಿದ್ಧಿ''ಯಲ್ಲಿ ಪ್ರಕಾಶನಗೊಂಡ ''ಪ್ರತೀಕ್ಷಾ ಹೈ ಸೂರ್ಯಕಿ'' ಎನ್ನುವ ಲೇಖನವನ್ನು ಓದುವುದು

ಅತೀ ಸೂಕ್ತವಾಗಿದೆ.

ಓದುಗರಿಂದ, ಸ್ನೇಹಿತರಿಂದ, ತಿಳಿದವರಿಂದ, ಇದರ ಬಗ್ಗೆ ಬರುವ ಸಲಹೆಗಳನ್ನು ನಾವು ಸದಾ ಸ್ವಾಗತಿಸುತ್ತೇವೆ.

ಕೊನೆಯದಾಗಿ, ಪೂಜ್ಯ ಸಾಧ್ವೀಶ್ರೀ ಭಾವ ಪ್ರಭಾವಶ್ರೀಜಿ ಹಾಗೂ ಶ್ರೀಮದ್‌ಜೀಯವರಿಂದ ಸ್ಥಾಪಿತಗೊಂಡ ಶ್ರೀ ಸುಬೋಧಕ ಪುಸ್ತಕ ಶಾಲಾ, ಖಂಭಟ, ಇದರ ಟ್ರಸ್ಟೀಗಳಿಗೆ ಸಾಧ್ವೀಜೀಯವರ ''ಪುಷ್ಪ ಮಾಲೆ''ಯ ವಿಮರ್ಶಾತ್ಮಕ ಅಧ್ಯಯನ ದ ಹಿಂದಿ ಕೃತಿಯ ಭಾಷಾಂತರಕ್ಕೆ ಅನುಮತಿ ನೀಡಿದ್ದಕ್ಕೆ ಅವರಿಗೆ ನಮ್ಮ ಅನಂತಾನಂತ ಕೃತಜ್ಞತೆಗಳು. ಶ್ರೀ ಕೆ. ಆರ್. ಬ್ಯಾನರ್ಜಿಯವರ ಬಂಗಾಳಿ ಭಾಷಾಂತರಕ್ಕೂ ಮತ್ತು ಶ್ರೀಮತಿ ಪುಷ್ಪಾಬಾಯಿ ಸ್ವಯಂಶಕ್ತಿ ಅವರ ಕನ್ನಡ ಭಾಷಾಂತರಕ್ಕೂ ನಾವು ಅವರಿಗೂ ಋಣಿಗಳಾಗಿದ್ದೇವೆ. ಶ್ರೀ ವಸಂತ ಭ್ಯಾ ಖೋಖನಿ, ಅವರ ಅಮೂಲ್ಯವಾದ ಮುನ್ನುಡಿಗಾಗಿ ಅವರಿಗೆ ನಮ್ಮ ಧನ್ಯವಾದಗಳು ಹಾಗೂ ಶ್ರೀ ಮಹೇಂದ್ರ ಶಾ, ಚಿಮನಬೈ ಎಲ್. ಶಾ, ಡಾ. ಎಚ್.ಎಸ್. ಮದನ ಕೇಸರಿ, ಶ್ರೀ ನಾಗಿನ್ ಖಿಂಚ ಮತ್ತು ಕು. ಕಿನ್ನರಿ ಟೊಲಿಯಾ, ಇವರಿಗೆ ಅವರ ಅನೇಕ ಸಲಹೆಗಳಿಗಾಗಿ ಹಾಗೂ ಇಂಪ್ರಿಂಟ್ಸ್ ಮತ್ತು ಸಿ.ಪಿ. ಇನ್ನೋವೇಷನ್ಸ್, ಬೆಂಗಳೂರು, ಈ ಸಂಸ್ಥೆಗಳಿಗೂ ಅವರ ಅತೀ ಕುಶಲ ಮುದ್ರಣಕ್ಕಾಗಿಯೂ ನಮ್ಮ ಅತ್ಯಂತ ಹಾರ್ದಿಕ ಧನ್ಯವಾದಗಳು.

ನಮ್ಮನ್ನು ನಡೆಯಿಸುತ್ತಿರುವ ಪರಮ ಶ್ರೇಷ್ಟ ವಿಶ್ವ ನಿಯಾಮಕರಿಗೆ ವಂದನೆ ಸಲ್ಲಿಸುತ್ತಾ, ಬುದ್ಧಿವಂತ ಸಹೃದಯೀ ವಾಚಕರ ಸಲಹೆಗಳನ್ನು ಬಯಸುತ್ತಾ, ಯಾವಾಗಲೂ ನಿಮಗಾಗಿ ಇರುವ.

ಪ್ರೊ. ಪ್ರತಾಪ್ ಕುಮಾರ್ ಜೆ. ಟೊಲಿಯಾ
ಶ್ರೀಮತಿ ಸುಮಿತ್ರಾ ಜೆ. ಟೊಲಿಯಾ

''ಜ್ಞಾನ ಪಂಚಮಿ''
27-10-2006

1580, ಕುಮಾರಸ್ವಾಮಿ ಲೇಔಟ್,
ಬೆಂಗಳೂರು-560078.
(ದೂ.. 080-26667882)

# ಸಪ್ತ ಭಾಷಿ ಆತ್ಮಸಿದ್ಧಿ

''ಸಪ್ತ ಭಾಷಿ ಆತ್ಮಸಿದ್ಧಿ'' ಪುಸ್ತಕದ ಸಪ್ತಭಾಷಿತ ಕೃತಿಯ (ಪದ್ಯಾನುವಾದ) ಮೂಲ ಕೃತಿ ಶ್ರೀಮದ್ ರಾಜಚಂದ್ರಜೀ - ಎಮ್. ಗಾಂಧಿಜಿಯವರ ಆಧ್ಯಾತ್ಮಿಕ ಮಾರ್ಗದರ್ಶಿಕೆ, ಶ್ರೀಮದ್ ರಾಜಚಂದ್ರಜೀಯವರ ಜನ್ಮದಿನವಾದ ಕಾರ್ತಿಕ ಪೌರ್ಣಮಿಯಂದು ಬೆಂಗಳೂರಿನಲ್ಲಿ ಬಿಡುಗಡೆಯಾಗಿತ್ತು.

''ಶ್ರೀ ಆತ್ಮ ಸಿದ್ಧಿ ಶಾಸ್ತ್ರ'' ಮೂಲತಃ ಗುಜರಾತಿಯಲ್ಲಿದ್ದು, ಹಿಂದೂ ತತ್ವಶಾಸ್ತ್ರಗಳ ಆರೂ ಪರಂಪರೆಯ ಸಾರವನ್ನು ಒಳಗೊಂಡಿದೆ. ಆಧುನಿಕ ಯುಗದ ಶ್ರೇಷ್ಠ ಜೈನ ದಾರ್ಶನಿಕ ಹಾಗೂ ಮಹಾತ್ಮಾ ಗಾಂಧಿಜಿಯವರ ಆಧ್ಯಾತ್ಮ ಮಾರ್ಗದರ್ಶಕರಾಗಿದ್ದ (ಇವರ ಬಗ್ಗೆ ಗಾಂಧಿಜಿಯವರು ತಮ್ಮ ಆತ್ಮ ಕಥನ - ಸತ್ಯ ಶೋಧನೆಯ ನನ್ನ ಪ್ರಯೋಗಗಳ ಕಥೆ ಇದರಲ್ಲಿ ಬೇರೆಯಾಗಿ ಹಾಗೂ ಗೌರವಪೂರ್ಣವಾಗಿ ಬರೆದಿದ್ದಾರೆ) ಶ್ರೀಮದ್ ರಾಜಾಚಂದ್ರಜೀಯವರು 105 ವರ್ಷಗಳ ಹಿಂದೆ ತಮ್ಮ ಅತ್ಯುನ್ನತ ಆನಂದ ಭಾವಪರವಶತೆಯ ಪರಾಕಾಷ್ಟೆಯಲ್ಲಿ ಹಾಗೂ ಆತ್ಮಸಾಕ್ಷಾತ್ಕಾರದ ಭಾವಪ್ರವಾಹದಲ್ಲಿ ವ್ಯಕ್ತಗೊಂಡ ಆಧ್ಯಾತ್ಮ ಅನುಭಾವಗಳನ್ನು ಇದರಲ್ಲಿ ದಾಖಲಿಸಿದ್ದಾರೆ.

ಶ್ರೀಮದ್ ರಾಜಚಂದ್ರಜಿಯವರ ಅತ್ಯಂತ ನಿವೇದಿತ ಅನುಯಾಯಿಯೂ ಕರ್ನಾಟಕದ ಹಂಪಿಯ ಶ್ರೀಮದ್ ರಾಜಚಂದ್ರ ಆಶ್ರಮದ ಸಂಸ್ಥಾಪಕರೂ ಆದ ಯೋಗಿಂದ್ರ ಯುಗಪ್ರಧಾನ ಶ್ರೀ ಸಹಜಾನಂದ ಘಂಜಿ ಮಹಾರಾಜರು (ಭದ್ರ ಮುನಿ - ಒಬ್ಬ ಜಾತ್ಯಾತೀತ ಜೈನ ಸಂತ) ಸಾಕ್ಷಾತ್ಕಾರ ಪಡೆದ ಹಾಗೂ ಆಧುನಿಕ ಚಿಂತಕರಾಗಿದ್ದ ಒಬ್ಬ ಮಹಾದ್ರಷ್ಟಾರರಾಗಿದ್ದರು. ಭಾಷೆ ಹಾಗೂ ಧರ್ಮದ ಸಂಕುಚಿತ ಮನೋಭಾವಗಳಿಂದ ಮೀರಿ ಬೆಳೆದ ಶ್ರೀಮದ್ ರಾಜಚಂದ್ರಜೀ ಹಾಗೂ ಮಹಾತ್ಮಾ ಗಾಂಧೀಜಿಯವರ ಮಾತೃಭಾಷೆ ಗುಜರಾತಿಗೆ ಮಾತ್ರ ಇಲ್ಲಿತನಕ ಸೀಮಿತವಾಗಿದ್ದ ಶ್ರೀ ಆತ್ಮಸಿದ್ಧಿ ಶಾಸ್ತ್ರಗಳಂತಹ ಜಾತ್ಯಾತೀತ ಆಧ್ಯಾತ್ಮಿಕ ಕೃತಿಗಳನ್ನು ಗುಜರಾತಿನ ಹೊರಗೆ, ಕರ್ನಾಟಕ, ಭಾರತ. ಹಾಗೂ ವಿಶಾಲ ಪ್ರಪಂಚದ ಇತರ ಹಲವಾರು ವಿವಿಧ ಭಾಷೆಗಳ

ಆಧ್ಯಾತ್ಮ ಯಾಚಕರಿಗೆ ದೊರಕ ಬೇಕಾದ ಆವಶ್ಯಕತೆಯನ್ನು ಶ್ರೀ ಸಹಜಾನಂದ ಘನ್‌ಜೀಯವರು ಕಂಡುಕೊಂಡರು.

ಆದ್ದರಿಂದ, ಅವರ ಈ ದೂರದೃಷ್ಟಿಯ ಕನಸನ್ನು ಕಾರ್ಯರೂಪಕ್ಕೆ ತರಲು 31 ವರ್ಷಗಳ ಹಿಂದೆಯೇ ನಿರ್ಧಾರ ಕೈಗೊಂಡು ಅವರು, ಸಮಾಧಿ ಹೊಂದುವ ಮೊದಲೇ, ಮಹಾತ್ಮಾ ಗಾಂಧೀಜಿಯವರ ಗುಜರಾತು ವಿದ್ಯಾಪೀಠದ ಅಹ್ಮದಾಬಾದಿನ ಹಾಗೂ ಕರ್ನಾಟಕದಲ್ಲಿ 1970ರಿಂದ ನೆಲೆಗೊಂಡ, ನಿವೃತ್ತ ಪ್ರಾಚಾರ್ಯರಾದ ಪ್ರೊಫೆಸರ್ ಪ್ರತಾಪ್ ಕುಮಾರ್ ಟೊಲಿಯಾ ಅವರನ್ನು ಪ್ರೋತ್ಸಾಹಿಸಿ, ಪ್ರೇರೇಪಿಸಿ, ಹುರಿದುಂಬಿಸಿ, ಶ್ರೀ ಆತ್ಮಸಿದ್ಧಿ ಕೃತಿಯ ವಿವಿಧ ಭಾಷಾಂತರದ ಸಂಪಾದಕೀಯ ಕಾರ್ಯದ ಜವಾಬ್ದಾರಿಯನ್ನು ವಹಿಸಿಕೊಟ್ಟರು. ಅದರಂತೆಯೇ ಶ್ರೀ ಸಹಜಾನಂದ ಘಂಜಿ ಹಾಗೂ ಪ್ರೊಫೆಸರ್ ಟೊಲಿಯಾ ಇಬ್ಬರೂ ಸೇರಿ ಏಳು ಭಾಷೆಗಳ ಆರಂಭಿಕ ಯೋಜನೆಯೊಂದನ್ನು ಹಾಕಿಕೊಂಡರು. ಅರ್ಥಾತ್, ಮೂಲ ಗುಜರಾತಿ, ಮರಾಠಿ, ಹಿಂದಿ, ಕನ್ನಡ, ಇಂಗ್ಲೀಷ್, ಸಂಸ್ಕೃತ ಮತ್ತು ಬಾಂಗ್ಲಾ ಭಾಷೆಗಳಲ್ಲಿ ಯೋಜನೆ. ಶ್ರೀ ಸಹಜಾನಂದ ಘಂಜಿಯವರು ಸ್ವತಃ ಈ ಹಿಂದೆಯೇ ಹಿಂದಿ ಭಾಷಾಂತರ ಒಂದನ್ನು ಮಾಡಿದ್ದರೂ, ಇಂಗ್ಲೀಷ್ ಹಾಗೂ ಹಿಂದಿ ಭಾಷಾಂತರವನ್ನು ಹೊಸದಾಗಿ ಮಾಡುವಂತೆ ಅವರು ಪ್ರೊ. ಟೊಲಿಯಾ ಅವರನ್ನು ಪ್ರೇರೇಪಿಸಿದರು, ಮಾತ್ರವಲ್ಲ ಮೂಲ ಗುಜರಾತಿಯ ಜೀವಾಳ ಭಾವಕ್ಕೆ ಚ್ಯುತಿಬಾರದೆ ಇರುವಂತೆ, ತರ್ಜುಮೆಯ ತಿದ್ದುಪಡಿ ಕೆಲಸವನ್ನೂ ಸಹ ಅವರೇ ಸ್ವತಃ ವಹಿಸಿಕೊಂಡು ಬಂದರು. ಅಷ್ಟರಲ್ಲಿ ಅವರು ದೇಹ ತ್ಯಾಗ ಮಾಡಿದ ಕಾರಣ, ಈ ಕೆಲಸ ಕೆಲಕಾಲ ಸ್ಥಗಿತಗೊಂಡಿತು. ಶ್ರೀ ಸಹಜಾನಂದ ಘನಜಿಯವರ ಉತ್ತರಾಧಿಕಾರಿಯಾದ ಹಂಪಿಯ ಆಶ್ರಮದ ಮತ್ತು ಪೂಜ್ಯ ಮಾತೆ, ಪದ್ಮಭೂಷಣ, ಪ್ರಾಜ್ಞಚಕ್ಷು ಡಾ. ಪಂಡಿತ್ ಶುಕ್ಲಾಜಿಯವರ ಅಮೂಲ್ಯ ನಿರ್ದೇಶನದಲ್ಲಿ, ಪ್ರೊ. ಪ್ರತಾಪ್‌ಕುಮಾರ್ ಟೊಲಿಯಾ ಈ ಕೆಲಸದಲ್ಲಿ ಮತ್ತೆ ತೊಡಗಿಸಿಕೊಂಡು ಬಂದರು. ಮೊದಲಿಗೆ ಶ್ರೀ ಸಹಜಾನಂದಜೀಯವರ ಹಿಂದಿ ಭಾಷಾಂತರದ ಜೊತೆಯಲ್ಲಿ

ಗುಜರಾತಿಯಲ್ಲೂ ಹೊರತಂದು ಬಿಡುಗಡೆ ಮಾಡಿದರು. ಜೊತೆ ಜೊತೆಯಲ್ಲಿ ಆತ್ಮ ಸಿದ್ಧಿ ಶಾಸ್ತ್ರದ ಮೊತ್ತ ಮೊದಲ ಎಲ್‌ಪಿ ಮುದ್ರಿಕೆ (ಈಗ ಸಿಡಿಯಾಗಿದೆ) ಯನ್ನು ಸಹ 1974ರಲ್ಲಿ ಬಿಡುಗಡೆ ಗೊಳಿಸಿದರು.

ತದ ನಂತರ ಇತರ ಭಾಷಾ ತರ್ಜುಮೆಗಳನ್ನು ಬೇರೆ ಬೇರೆ ವಿದ್ವಾಂಸರಿಂದ ಉದಾ|| ಕನ್ನಡದ ಡಾ. ಎ.ಎನ್. ಉಪಾಧ್ಯೆಯರವರಿಂದ ಕನ್ನಡದಲ್ಲಿ ಇಲ್ಲದೇ ಇರುವ ಕನ್ನಡ ಭಾಷಾಂತರ ಕಾರ್ಯವನ್ನು ಮತ್ತು ಶ್ರೀ ಭವರ್‌ಲಾಲ್ ನಹಾಟಾ - ಕಲ್ಕತ್ತಾ ಇವರನ್ನು ಇತರ ಭಾಷೆಗಳ ತರ್ಜುಮೆ ಬಗ್ಗೆ ಪ್ರೋತ್ಸಾಹಿಸಿ, ಸಪ್ತ ಭಾಷಿ ಆತ್ಮಸಿದ್ಧಿಯ ಬಂಗಾಲಿ ಭಾಷಾಂತರವನ್ನು ಅವರಿಂದ ಪಡೆದು ಹೀಗೆ ಇತರ ಭಾಷೆಗಳ ಭಾಷಾಂತರಗಳನ್ನು ಶ್ರೀ ತೊಲಿಯಾ ಅವರು, ಸಂಗ್ರಹಿಸುತ್ತಾ ಹೋದರು. ಒಂದು ಕಡೆಯಿಂದ ಮೂಲ ಭಾವಗಳಿಗೆ ಧಕ್ಕೆಯಾಗದಂತೆ, ಭಾಷೆಯಲ್ಲಿ ಕೊರತೆ ಕಾಣದಂತೆ, ತಿದ್ದುಪಡಿಗಳನ್ನು ಮಾಡುವುದು. ಏಕೆಂದರೆ, ಈ ಎಲ್ಲಾ ಪರ್ಯಾಯ ಭಾಷಾಂತರಗಳು (ಕನ್ನಡದ ಹೊರತು) ಮೂಲ ಗುಜರಾತಿಯಂತೆ, ಪದ್ಯರೂಪಗಳಲ್ಲೇ ಇದ್ದುದ್ದರಿಂದ, ಒಂದು ಸವಾಲೇ ಆಗಿತ್ತು. ಇನ್ನೊಂದು ಕಡೆಯಿಂದ ಕೊನೆತನಕ ಕಾಡುತಿದ್ದ ಆರ್ಥಿಕ ಕೊರತೆ. ಸಮಾಜವು ಇಂತಹ ಕೃತಿಗಳ ವಿಶ್ವಾತ್ಮಕ ಪ್ರಭಾವ ಹಾಗೂ ಪದ್ಧತಿ ಮಾತ್ರವಲ್ಲ ಅವುಗಳ ನಿರಂತರ ಉಪಯುಕ್ತತೆ ಬಗ್ಗೆ ಲಕ್ಷ್ಯಕೊಡದೆ, ಸಾಂಪ್ರದಾಯಿಕ ಕರ್ಮವಿಧಿ-ವಿಧಾನಗಳ ಬಗ್ಗೆಯೇ ಜಾಸ್ತಿ ಪ್ರಾಧಾನ್ಯ ಕೊಡುತ್ತಿರುವುದು ಸಹ ಇದಕ್ಕೆ ಕಾರಣವಾಗಿದೆ. ಸಂಪ್ರದಾಯಸ್ಥ ಜನರು, ಸಂಸ್ಥೆಗಳು, ಹಂಪಿಯಲ್ಲಿರುವುದರ ಸಹಿತ ಆಶ್ರಮಗಳು, ಈ ಯೋಜನೆ ಬಗ್ಗೆ ಆರ್ಥಿಕ ಸಹಾಯವನ್ನು ಕೊಡುವ ಯಾವ ಗಮನವನ್ನೂ ನೀಡಲಿಲ್ಲ. ಇದು ಈ ಸಂಪಾದಕರ ಪರೀಕ್ಷೆಯಾಗಿತ್ತು. ಆದರೆ, ಅಗಲಿದ ಮಹಾ ಪ್ರಭುವಿನ ಆಜ್ಞೆ, ಸಂದೇಶ, ಹರಕೆ ಹಾಗೂ ಆಶೀರ್ವಾದಗಳು ನಮ್ಮೊಂದಿಗಿದ್ದವು. ಆದುದರಿಂದ ಎಲ್ಲಾ ವೈಪರೀತ್ಯಗಳನ್ನೂ ತೊಂದರೆ ಸಂಕಷ್ಟಗಳನ್ನೂ ಹೆಜ್ಜೆ ಹೆಜ್ಜೆಗೂ ನಮ್ಮ ದೃಢ ನಿರ್ಧಾರದಿಂದ ಎದುರಿಸಿ ನಾವು

ಮುಂದುವರೆದೆವು.

ಇದಾದ ನಂತರ, 1996ರಲ್ಲಿ (ಸ್ಯಾನ್ ಫ್ರಾನ್ಸಿಸ್ಕೊ ನಗರದಲ್ಲಿ ಆರಂಭಿಸಿ ಒಂದು ವರ್ಷವಿಡೀ ಕಾರ್ಯಕ್ರಮಗಳನ್ನು ಹಮ್ಮಿಕೊಂಡು) ಆತ್ಮಸಿದ್ಧಿಯ ಶತಮಾನೋತ್ಸವವು ಅಮೇರಿಕದ ಚಿಕಾಗೊದಲ್ಲಿ ಚಾಲನೆಗೊಂಡಿತು. ಸಪ್ತ ಭಾಷಿ ಆತ್ಮಸಿದ್ಧಿಯ ಮೊದಲ ಹಸ್ತಪ್ರತಿಯನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಅದರ ಅಚ್ಚಾಗುವ ಮೊದಲೇ ಬಿಡುಗಡೆಗೊಳಿಸಲಾಯಿತು. ಸಂಪಾದಕ ಪ್ರೊ. ಟೊಲಿಯಾ ಅವರು ಆ ಸಮಯದಲ್ಲಿ ಹಾಜರಿದ್ದು ಕೃತಿಯ ಬಗ್ಗೆ ವಿವರಗಳನ್ನು ಸಭಿಕರಿಗೂ, ಚಿಕಾಗೊ ನಗರದ ಮಾಧ್ಯಮ ಪ್ರತಿನಿಧಿಗಳಿಗೂ ಒದಗಿಸಿದರು. ಈಗ ಬಿಡುಗಡೆಯಾದ ಕೃತಿಯಲ್ಲಿ ಇದರ ವಿವರಣೆ ಹಾಗೂ ಭಾವಚಿತ್ರಗಳನ್ನು ಪ್ರಕಾಶನಗೊಳಿಸಿದೆ.

ತತ್ವಜ್ಞಾನಿ ಶ್ರೀ ಜೆ. ಕೃಷ್ಣಮೂರ್ತಿ ಹಾಗೂ ಆಚಾರ್ಯ ವಿನೋಬಾ ಭಾವೆಯವರ ಭಾವನಾತ್ಮಕವಾದ ಜೊತೆಗಾರರಾದ ವಿದುಷಿ ವಿಮಲಾ ಥಾಕ್ಕರವರು ತಮ್ಮ ಅತ್ಯಂತ ಸೂಕ್ತವಾದ ಪ್ರಾಸ್ತಾವಿಕ ಮುನ್ನುಡಿಯಲ್ಲಿ ಬರೆಯುತ್ತಾ ಪ್ರತಿಯೊಬ್ಬ ನೈಜ ಸಾಧಕನೂ ಅಧ್ಯಯನ ಮಾಡಲೇ ಬೇಕಾದ ಪುಸ್ತಕಗಳ ರತ್ನ ಇದು. ಆತ್ಮ ದರ್ಶನದ ಆಕಾಂಕ್ಷಿಗಳು ಇದನ್ನು ಓದಲೇ ಬೇಕು ಎಂದಿದ್ದಾರೆ. ಕೊನೆಯ ಪುಟಗಳ ಅನುಬಂಧದಲ್ಲಿ ಮಹಾತ್ಮ ಗಾಂಧೀಜಿಯವರ ಮತ್ತು ಶ್ರೀಮದ್ ರಾಜಚಂದ್ರಜೀಯವರ ನಡುವಿನ ಉಲ್ಲೇಖನೀಯ ಸಂಬಂಧದ ಬಗ್ಗೆ ತಿಳಿಸಿದೆ - ಮಾತ್ರವಲ್ಲ ಶ್ರೀಮಾನ್ ರಾಜಚಂದ್ರಜಿಯಂತಹ ಅತ್ಯುತ್ಕೃಷ್ಟ ಲೇಖಕರ ಬಗ್ಗೆ ಮಾತಿದೆ. ಈ ಯೋಜನೆಯನ್ನು ಯಶಸ್ವಿಯಾಗಿ ಮುಗಿಸುವಂತೆ ಎಲ್ಲಾ ಪ್ರೋತ್ಸಾಹ ನೀಡಿದವರೆಂದರೆ ವಿಮಲಾ ದೀದಿಯವರು.

ಕಟ್ಟಕಡೆಗೆ ಈಗ ಶ್ರೀಮದ್ ರಾಜಚಂದ್ರಜಿಯವರ ನಿರ್ವಾಣ ಶತಮಾನ ಸಮಯದಲ್ಲಿ ಮತ್ತು ಶ್ರೀ ಭಗವಾನ್ ಮಹಾವೀರರ 2600ನೇ ಹುಟ್ಟುಹಬ್ಬದ ವಾರ್ಷಿಕ ಜಯಂತಿಯ ಆಚರಣೆಯ ಸಂದರ್ಭದಲ್ಲಿ ಸಪ್ತಭಾಷಿ ಆತ್ಮಸಿದ್ಧಿಯು ಮುದ್ರಣ ಹಾಗೂ ಪ್ರಕಾಶನ ಯೋಗ್ಯ ಪೂರ್ಣತೆಯನ್ನು ಪಡೆದು ಕೊಂಡು,

ನಮ್ಮ 31 ವರ್ಷಗಳ ಸತತ ಶ್ರಮ, ಶ್ರದ್ಧೆಗಳ ಫಲವಾಗಿ ಬೆಳಕು ಕಾಣುವಂತಾಗಿದೆ. ಇದನ್ನು ಮಂಗಳಕರ ದಿನವಾದ ಕಾರ್ತೀಕ ಪೌರ್ಣಿಮೆಯಂದು, ಮಾತ್ರವಲ್ಲ ಶ್ರೀಮದ್ ರಾಜಚಂದ್ರಜೀಯವರ (ಗುರು ನಾನಕರದ್ದೂ ಸಹ) ಜನ್ಮದಿನದಂದು ಮತ್ತು ಪುಣ್ಯಕರವಾದ ಸಿದ್ಧಾಚಲ ಯಾತ್ರೆಯ ತಿಥಿಯಂದು ಸಹ ಬೆಂಗಳೂರಿನಲ್ಲಿ ಪೂಜ್ಯ ಜೈನ ಆಚಾರ್ಯ ಶ್ರೀ ಚಂದ್ರಾನನ ಸಾಗರಜಿಯವರ ದಿವ್ಯ ಸನ್ನಿಧಿಯಲ್ಲಿ ರಾಜ ಸಂಭ್ರಮದಲ್ಲಿ ಬಿಡುಗಡೆ ಮಾಡಲಾಯಿತು. ಸಾವಿರಾರು ಭಕ್ತರನ್ನು ಆಚಾರ್ಯ ಚಂದ್ರಾನನ ಸಾಗರಜೀಯವರು ಪ್ರತಿ ತಿಂಗಳು ತಮ್ಮ ಮಂತ್ರ ಮುಗ್ಧ ಮಾಂಗಲಿಕ ಭಾಷಣದಿಂದ ಆಕರ್ಷಿಸುತ್ತಿದ್ದಾರೆ. ಪ್ರೊ. ಟೋಲಿಯಾರವರನ್ನು ಅವರ ವಿವಿಧ ತರಹದ ಕೊಡುಗೆಗಳಿಗಾಗಿ ಪ್ರಶಂಸಿಸುತ್ತಾ, ಅಧ್ಯಯನಶೀಲ, ಜ್ಞಾನಪಿಪಾಸು, ಶ್ರೀ ಅಶೋಕ ಸಂಘ್ವಿಯವರು ಸಪ್ತಭಾಷಿಯ ಪದ್ಯರೂಪಕದ ವಿಶ್ವಾತ್ಮಕ ಭಾವ ಹಾಗೂ ಉಪಯುಕ್ತತೆ ಬಗ್ಗೆ ಬೆಳಕು ಚೆಲ್ಲುತ್ತಾ, ಅದನ್ನು ಬಿಡುಗಡೆ ಗೊಳಿಸಿದರು. ಸಂಪಾದಕರು ಆಧ್ಯಾತ್ಮ ಸಾಹಿತ್ಯ ಹಾಗೂ ಸಂಗೀತ ಕ್ಷೇತ್ರಗಳಿಗೆ ನೀಡಿದ ಕೊಡುಗೆಗಳ ಬಗ್ಗೆ ಆಚಾರ್ಯಜೀಯವರು ಮೆಚ್ಚುಗೆ ವ್ಯಕ್ತ ಪಡಿಸಿದರು.

''ಸಪ್ತ ಭಾಷಿ ಆತ್ಮಸಿದ್ಧಿ'' ಯು 31 ವರ್ಷಗಳ ದೀರ್ಘ ಸಾಧನೆ ಹಾಗೂ ಪರೀಕ್ಷೆ, ಪ್ರಯೋಗಗಳ ಇತಿಹಾಸ ಹೊಂದಿದ್ದುದರ ಸುಳುವುಗಳನ್ನು ಅದರ ಪುಟಗಳಿಂದ ಕಾಣಬಹುದು. ಆತ್ಮಸಿದ್ಧಿ ಶಾಸ್ತ್ರದ ಪದ್ಯ ರೂಪದ ಪರ್ಯಾಯ ಭಾಷಾಂತರಗಳು ಮೂಲ ಗುಜರಾತಿಯ ಹೊರತಾಗಿಯೂ ಸಂಸ್ಕೃತ, ಹಿಂದಿ, ಮರಾಠಿ, ಬೆಂಗಾಲಿ, ಕನ್ನಡ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿದ್ದು, ಅವುಗಳ ಸಂಶೋಧನಾಯುಕ್ತ ಟಿಪ್ಪಣಿಗಳೂ ಸಹ ಇವೆ. ಸುಂದರವಾದ ಮುಖ ಪುಟದೊಂದಿಗೆ ಮಹಾತ್ಮಾ ಗಾಂಧೀಜೀಯವರ ಮತ್ತು ಶ್ರೀಮದ್ ರಾಜಚಂದ್ರಜೀಯವರ, ಚಿತ್ರಫಲಕಗಳನ್ನು ಒಳಗೊಂಡು 200 ಪುಟಗಳ ಎ-4 ಡೆಮ್ಮಿ ಗಾತ್ರದಲ್ಲಿ ಈ ಭಾಷಾಂತರ ಕೃತಿಗಳು ಹೊರಹೊಮ್ಮಿದ್ದು ಆ ಮೂಲಕ ಓದುಗರನ್ನು ಲೇಖಕರು ಆಕರ್ಷಿಸುತ್ತಾರೆ.

ಜೊತೆಯಲ್ಲೇ ಪ್ರಕಾಶಕರಾದ, ಜಿನ ಭಾರತಿ ವರ್ಧಮಾನ ಭಾರತಿ ಅಂತರಾಷ್ಟ್ರೀಯ ಫೌಂಡೇಶನ್ ಇವರು ಮಾಡಿದ ಕಾರ್ಯ ಚಟುವಟಿಕೆ ಸಾಹಿತ್ಯಕ ಆಧ್ಯಾತ್ಮಿಕ ಹಾಗೂ ಸಂಗೀತ ಕ್ಷೇತ್ರದಲ್ಲಿ ನೀಡಿದ ಕೊಡುಗೆಗಳು (ಇದರ ಸಾಧನೆಗಳ ದೀರ್ಘ ಇತಿಹಾಸದಲ್ಲಿ ಪೌರ್ವಾತ್ಯ ಪ್ರಾಚ್ಯ ಭವ್ಯಕೃತಿಗಳ ದಾಖಲಾತಿಗಳು - ಇದೇ ಆತ್ಮ ಸಿದ್ಧಿ ಶಾಸ್ತ್ರ ಮತ್ತು ಭಕ್ತಾಮರ ಸ್ತೋತ್ರ, ಕಲ್ಯಾಣ ಮಂದಿರ ಸ್ತೋತ್ರ, ಧ್ಯಾನ ಸಂಗೀತ, ಧ್ಯಾನಕ್ಕಾಗಿ ಸಂಗೀತ, ಈಶೋಪನಿಷದ್, ಓಂ ತತ್ ಸತ್ ಇತ್ಯಾದಿಗಳೂ ಸೇರಿವೆ. ಮಾಜಿ ಪ್ರಧಾನಿ ದಿ. ಮೊರಾರ್ಜಿ ದೇಸಾಯಿಯವರು ಬಿಡುಗಡೆ ಮಾಡಿದ ಕೊನೆಯ ಹೊತ್ತಿಗೆ ಓಂ ತತ್ ಸತ್ ಆಗಿದೆ) ಮತ್ತು 1970, 1974, 1976, 1996 ರಿಂದ 2001, ರಷ್ಟು ದೀರ್ಘಕಾಲಿಕ ಕೆಲಸ ಕಾರ್ಯಗಳ ಒಂದು ಕಿರು ಪಟ್ಟಿಯೂ ಅವರ ಬಗ್ಗೆ ದೈತ್ಯ ಪರಿಮಾಣದ ಮಾಹಿತಿಯನ್ನು ನೀಡುತ್ತದೆ, ಯಾವ ಆರ್ಥಿಕ ನೆರವು ಇಲ್ಲದೆ, ಯಾವ ದಾನಿಗಳ ಸಹಾಯವೂ ಇಲ್ಲದೆ, ಆಧ್ಯಾತ್ಮಿಕ, ಸಾಂಸ್ಕೃತಿಕ ಕಾರ್ಯವನ್ನು ಇವರು ನಡೆಯಿಸಿಕೊಂಡು ಬಂದಿರುವುದು ಅಮೋಘ ಸಾಧನೆಯಾಗಿದೆ.

ಅತ್ಯಂತ ಅಮೂಲ್ಯ ಹಾಗೂ ಶ್ರೇಷ್ಟ ಕೃತಿಯಾದ ಈ ಸಪ್ತಭಾಷಿ ಆತ್ಮಸಿದ್ಧಿಯ ಬೆಲೆಯು ನ್ಯಾಯಯುಕ್ತವಾಗಿ, 301/- ರೂಪಾಯಿ ಭಾರತದಲ್ಲಿದ್ದು, ಹೊರ ರಾಷ್ಟ್ರಗಳಲ್ಲಿ 51 ಡಾಲರ್‌ಗಳಾಗಿದೆ. ಈ ಅಂತರಾಷ್ಟ್ರೀಯ ಪ್ರಕಾಶನವು ಮೂಲ ಕನ್ನಡದ ಅನುವಾದವಾಗಿದ್ದು ಕನ್ನಡ ಓದುಗರಿಗೂ ಉಪಯುಕ್ತವಾಗಿದೆ. ಕನ್ನಡದ ಕೃತಿಯನ್ನು ಖ್ಯಾತ ವಿದ್ವಾಂಸರಾದ ಡಾ. ಎ.ಎನ್. ಉಪಾಧ್ಯೆಯವರು ಮಾಡಿದ್ದು, ಈಗಿನ ಪ್ರಸಿದ್ಧ ವಿದ್ವಾಂಸರಾದ ಪ್ರಾಂಶುಪಾಲ - ಡಾ. ಎಮ್. ಎ. ಜಯಚಂದ್ರ ಅವರು ಅದನ್ನು ಪರಿಷ್ಕರಿಸಿ ಸಂಕ್ಷೇಪಿಸಿದ್ದಾರೆ. ಅದೂ ಸಹ ಅಧ್ಯಯನಕ್ಕೆ ಯೋಗ್ಯವಾಗಿದೆ.

ಸಪ್ತಭಾಷಿ ಆತ್ಮಸಿದ್ಧಿಯ ಪ್ರತಿಗಳು ಹಾಗೂ ಕಾಂಪೆಕ್ಟ್ ಡಿಸ್ಕು ಮತ್ತು ಕ್ಯಾಸೆಟ್ಟುಗಳು ಮತ್ತು ಇತರ ಕೃತಿಗಳು ಬೇಕಾದಲ್ಲಿ ''ವರ್ಧಮಾನ್ ಭಾರತಿ ಇಂಟರ್‌ನ್ಯಾಷನಲ್ ಫೌಂಡೆಶನ್''

ಇವರ ಪ್ರಭಾತ್ ಕಾಂಪ್ಲೆಕ್ಸ್, ಕೆ.ಜಿ. ರೋಡ್, ಬೆಂಗಳೂರು-560009 (ದೂರವಾಣಿ : 080-22251552) ಈ ಆಫೀಸಿನಲ್ಲಿ ಅಥವಾ ಕುಮಾರಸ್ವಾಮಿ ಬಡಾವಣೆ (ದೂರವಾಣಿ : 080-26667882) ಕಾರ್ಯಾಲಯಗಳಲ್ಲಿ ಕ್ರಾಸ್ ಮಾಡಿದ ಬ್ಯಾಂಕ್ ಡಿ.ಡಿ. ಅಥವಾ ಎಮ್. ಓ. ಮುಖಾಂತರ ಅಥವಾ ನಗದು ನೀಡಿ ಪಡೆದುಕೊಳ್ಳಬಹುದು. ಹೊರಗಡೆ ರವಾನೆಗೆ ಬೇರೆ ಟಪಾಲು ಖರ್ಚು ನೀಡ ಬೇಕಾಗುತ್ತದೆ. ಅಮೇರಿಕದಲ್ಲಿ (USA) ಮುಂಚಿತವಾಗಿ 1. ಶ್ರೀ ಮುಕುಂದ ಮೆಹ್ತಾ (ಫೋನ್ : 7813446030) 2. ಮಹಾವೀರ ವರ್ಲ್ಡ್ ವಿಜನ್, ಡಾ ಸಲ್ಗಿಯ (ಫೋನ್ : 6148992678) ಇಲ್ಲಿ ಪ್ರತಿಗಳಿಗೆ ಬೇಡಿಕೆಯನ್ನು ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಮೇಲಿನ ಕಾರ್ಯಾಲಯಗಳಿಗೆ ಅಥವಾ ದೂರವಾಣಿಗಳಿಗೆ ಕರೆ ಮಾಡಿ ಸಂಪರ್ಕಿಸಬಹುದು.

**- ಜಿನ ಭಾರತಿ : ಬೆಂಗಳೂರು**
E-mail : prataptoliya@bsnl.in
pratapkumartoliya@gmail.com

## ಜಿನ ಭಾರತಿ

## ಹಿಂದಿ ಸಿಡಿಗಳು ಮತ್ತು ಕ್ಯಾಸೆಟ್ಟುಗಳು

1. ಕಲ್ಪತರು ಟಾಕ್ಸ್ ಸೆಟ್ (ಭದ್ರಮುನಿ ಪಿ.ಕೆ.ಟಿ.)
2. ದಶಲಕ್ಷ್ಮಿ ಧರ್ಮ - ಟಾಕ್ಸ್ ಸೆಟ್ (ಭದ್ರಮುನಿ)
3. ಪರಮಗುರು ಪ್ರವಚನ - ಭದ್ರಮುನಿ
4. ದಕ್ಷಿಣ ಪಥ ಕಿ ಸಾಧನಾ ಯಾತ್ರ ಮತ್ತು ಆತ್ಮದ್ರಷ್ಟ ಮಾತಾಜಿ - ಆಡಿಯೊ ಬುಕ್)
5. ಪಾರೂಲ್ ಪ್ರಸೂನ್-ಗೀತೆಗಳು (ಆಡಿಯೋ ಬುಕ್)
6. ಮ್ಯೂಜಿಕ್ ಫಾರ್ ಮೆಡಿಟೇಶನ್ (ಧೂನ್ - ಧ್ಯಾನ್)
7. ಮ್ಯೂಜಿಕ್ ಫಾರ್ ಮೆಡಿಟೇಶನ್ (ಧ್ಯಾನ - ಸಂಗೀತ್)
8. ಮ್ಯೂಜಿಕ್ ಫಾರ್ ಮೆಡಿಟೇಶನ್ (ಯೋಗ ಕಾಂಪ್) VYOMA
9. ಮ್ಯೂಜಿಕ್ ಫಾರ್ ಮೆಡಿಟೇಶನ್ (ಆನಂದ ಲೋಕ)
10. ಮ್ಯೂಜಿಕ್ ಫಾರ್ ಮೆಡಿಟೇಶನ್ (ಓಂಕಾರನಾದ ಧ್ಯಾನ)
11. ಮಹಾವೀರ ದರ್ಶನ
12. ಬಾಹುಬಲಿ ದರ್ಶನ
13. ಆತ್ಮಖೋಜ್ - ಅನಂತ ಕೀ ಅನುಗೂಂಜ್
14. ಬಾರಹ ಭಾವನ ಆಸರ ಆರಾಧಾನ
15. ಬ್ರಹ್ಮಗುಲಾಲ್ ಕಥೆ
16. ಭಿಕ್ಷು ಚಾಲೀಸಾ
17. ಭಾ ಢಾಲಾ 1 ಮತ್ತು 2
18. ಚಂದಾ ಕಿ ಚಾಂದ ಕವಿತಾಯೇ
19. ದಾದಗುರು ದರ್ಶನ
20. ದಿವಾಕರ ದರ್ಶನ
21. ದರ್ಶನ ಸ್ತೋತ್ರ ಸಮಯಿಕ
22. ಗೀತ ಘಜಲ್‌ಗಳು - ಗೀತೆ ಕವಿತೆಗಳು

23. ಜಿನ ವಂದನ
24. ಜೈನ ಭಜನೆಗಳು
25. ಕಹತ್ ಕಬೀರಾ
26. ಮೇರಿ ಭಾವನ ಅನುಭವ ವಾಣಿ
27. ಮಿರಾ ಕೆ ಭಕ್ತಿ ಪದ
28. ಮಹಾಯೋಗ ಆನಂದ ಘನ ಕೆ ಪದ್ಯ
29. ನವಕರ ಮಹಿಮಾ
30. ರತ್ನಾಕರ ಪಚೀಶಿ
31. ರಾಜಪದ - ಸಹಜಾನಂದ ಪದ - ರಾಜ ವಾಣಿ
32. ರತ್ನತ್ರಯ ವೃತ ಕಥಾ
33. ಸ್ಪಂದನ - ಸಂವೇದನ
34. ಸೋನಾಗಿರ್ : ದಶಲಕ್ಷ್ಮಿ ಕಥ
35. ಸ್ವಾನಕ್ವಾಶಿ ಪ್ರತಿಕ್ರಮಣ
36. ವೀರೋಂಕಿ ಬಾತ್

# ''ಪುಷ್ಪಮಾಲೆ'' ಯ ಪುಷ್ಪಸುಗಂಧ

ಇವತ್ತು ..... ಈ ದಿನ, ಮತ್ತು ದಿನ ದಿನವೂ ಸುಂದರ ! ದಿವ್ಯ ಪ್ರಾತಃಕಾಲ ! ಈ ಸುವರ್ಣ ಕ್ಷಣಗಳು ಇಂದಿನವು-ಕಳೆಯುತ್ತಿರುವ ಕಾಲ !

ಭಗವಾನ್ ಮಹಾವೀರ ಈ ಅಮೋಘ ಮಾತುಗಳಿಂದ ಕಳೆದು ಹೋಗುತ್ತಿರುವ ಅಮೂಲ್ಯ ಕ್ಷಣಗಳ ಬಗ್ಗೆ ಹೀಗೆ ಸೂಚಿಸಿದರು - ''ಇನ್‌ಮೇವ ಖನಮ್ ವಿಯನಿಯ'' ಅರ್ಥಾತ್ ''ಇದು ನಮ್ಮ ಸತ್ಯ ಸಮಯ, ನಮ್ಮದೇ ಆದ ಸಮಯ - ಪ್ರಸ್ತುತದ ಸುವರ್ಣ ಕ್ಷಣಗಳು''

ಇಲ್ಲಿ ಈ 'ಪುಷ್ಪ ಮಾಲೆ' ಯ ದಿವ್ಯ ಪುಷ್ಪಗಳ ಸರಮಾಲೆಯಲ್ಲಿ ಶ್ರೀಮದ್ ರಾಜಚಂದ್ರಜೀಯವರು - ಈ ಕಾಲ ಕಂಡ ಮಹಾ ದಾರ್ಶನಿಕರು, ವರ್ತಮಾನದ ಬಗ್ಗೆ ಒತ್ತು ನೀಡುತ್ತ ಈ ಅಮೂಲ್ಯವಾದ ''ಇಂದು'' ನಮ್ಮ ಕೈಯಲ್ಲಿದೆ ಎಂದರು. ಅವರದೇ ಭಾವಸ್ಥಿತಿ ಮತ್ತು ಅನ್ವೇಷಣೆಗಳು - ''ಅಪ್ರಮದ ಯೋಗ'' ದ ಮೂಲಕ ಪೂರ್ಣ - ನಿರಂತರ-ಸಮಗ್ರ - ಜಾಗ್ರತ-ವಾದ ಸಹಜ ಧ್ಯಾನ ಸ್ಥಿತಿಯು ನಮಗೆ - ನಮ್ಮ ಪ್ರತಿಯೊಂದು - ಓಡುವ ಕ್ಷಣಗಳನ್ನು ಪೂರ್ಣ-ವಾಗಿ ಯೋಗ್ಯ ರೀತಿಯಲ್ಲಿ ಉಪಯೋಗಿಸಿಕೊಳ್ಳುವ ಬಗ್ಗೆ ಒಂದು ಉತ್ತಮ ಮಾರ್ಗವನ್ನು ಒದಗಿಸಿದ್ದಾರೆ. ಅವರ ಹಿಂದಿನ ದೇವಪ್ರಭುಗಳ ದಿವ್ಯ ಪ್ರೇರಣೆಗಳಿಂದ ಹಾಗೂ ವಿಶ್ವಪ್ರಭುವು ತನ್ನ ಶಿಷ್ಯೋತ್ತಮ ಗಣಾಧಾರ ಗೌತಮನಿಗೆ ತಿಳಿಸಿ ಎಚ್ಚರಿಸಿದ ವಾಕ್ಯಗಳಿಂದ, ಇದು ಅವತರಿಸಿದೆ.

''ಪ್ರಾಪಂಚಿಕ ಅರ್ಥಹೀನ ವಿಷಯಗಳಲ್ಲಿ ಒಂದು ಕ್ಷಣವನ್ನಾದರೂ ವ್ಯರ್ಥಗೊಳಿಸದಿರು - ಓ ಗೌತಮ''

ಪುಷ್ಪ ಮಾಲೆಯ ಮೊದಲ ಪುಷ್ಪದಲ್ಲೇ ಶ್ರೀಮದ್ ರಾಜಚಂದ್ರಜೀಯವರು ಅತೀ ಸುಂದರವಾಗಿ ಚಿತ್ರಿಸಿದ ಇದೇ ಸುವರ್ಣ ಶಬ್ದಗಳನ್ನು ನಾವು ಕೇಳುತ್ತ, ಎಚ್ಚರಗೊಂಡು ನೆನೆಯುತ್ತ ಅದರ ಬಗ್ಗೆ ಗಮನ ನೀಡೋಣ.

''ರಾತ್ರಿ ಕಳೆದು ಹೋಯ್ತು, ದಿವ್ಯ ಪ್ರಭಾತ ಮೂಡುತ್ತಿದೆ, ನಿದ್ರಾವಸ್ಥೆಯ ಹಿಡಿತದಿಂದ ನೀವು ಬಿಡುಗಡೆ ಹೊಂದಿದ್ದೀರಿ. ಶತಮಾನಗಳ ಅಜ್ಞಾನದ ನಿದ್ರೆಯನ್ನು ಈಗ ಝಾಡಿಸಿ ಒದೆಯಿರಿ''

ಎಂತಹ ಅದ್ಭುತವಾದ ಎಚ್ಚರಿಕೆ ಇದು ! ಅದೆಂತಹ ಸುಂದರವಾದ ಜಾಗೃತಿಯ ಘಂಟಾ ನಿನಾದ ! ಪುಷ್ಪಮಾಲೆಯ ಗುಲಾಬಿ ವನದಲ್ಲಿ ಅರಳಿದ ಮೊತ್ತ ಮೊದಲ ಗುಲಾಬಿಯ ಎಂತಹ ಅಮೋಘವಾದ ಸುಗಂಧ ಸುವಾಸನೆಯಿದು !

ಈ ಇಡೀ ಪುಷ್ಪಮಾಲೆಯ ದಿವ್ಯ ಸುಗಂಧವನ್ನು ನಾವು ಆಸ್ವಾದಿಸೋಣ ಹಾಗೂ ಈ ದಿನವನ್ನೂ ಪೂರ್ತಿ ಬದುಕನ್ನೂ ಧನ್ಯವಾಗಿಸೋಣ !

**ಜಿನ ಭಾರತಿ**

**ಬೆಂಗಳೂರು**

ಶ್ರೀಮದ್ ರಾಜಚಂದ್ರಜೀ ರವರ

# ಪುಷ್ಪಮಾಲ

ಕನ್ನಡ ಅನುವಾದ ಶ್ರೀಮತಿ ಪುಷ್ಪಾಬಾಯಿ ಸ್ವಯಂ ಶಕ್ತಿ

1. ರಾತ್ರಿ ಕಳೆದಿದೆ, ಹಗಲು ಮೂಡಿದೆ, ನಿದ್ರೆಯಿಂದ ಎಚ್ಚರಗೊಂಡಿದ್ದೀರಿ. ಭಾವನಿದ್ರೆಯನ್ನು ತೊರೆಯುವ ಪ್ರಯತ್ನ ಮಾಡಿ.

2. ಕಳೆದಿರುವ ರಾತ್ರಿ ಮತ್ತು ಹಿಂದಿನ ಜೀವನದ ಮೇಲೆ ದೃಷ್ಟಿ ಹಾಯಿಸಿ ನೋಡಿರಿ.

3. ಸಫಲವಾದ ಸಮಯಕ್ಕಾಗಿ ಆನಂದಿಸಿ ಮತ್ತು ಇಂದಿನ ದಿವಸ ಕೂಡ ಸಫಲಗೊಳಿಸಿ. ನಿಷ್ಫಲವಾದ ದಿವಸಕ್ಕಾಗಿ ಪಶ್ಚಾತ್ತಾಪ ಪಟ್ಟು ನಿಷ್ಫಲತೆಯನ್ನು ವಿಸ್ಮೃತಗೊಳಿಸಿರಿ.

4. ಕ್ಷಣ ಕ್ಷಣವನ್ನು ಕಳೆಯುತ್ತಾ ಅನಂತ ಕಾಲವೂ ಕಳೆಯಿತು. ಆದರೂ ಸಿದ್ಧಿ ಪ್ರಾಪ್ತಿಯಾಗಲಿಲ್ಲ.

5. ಸಫಲತೆಯ ಕಾರ್ಯ ಒಂದೂ ಕೂಡ ನಿನ್ನಿಂದ ಸಂಬವಿಸದಿದ್ದಲ್ಲಿ ಪುನಃ ಪುನಃ ನಾಚಿಕೊಳ್ಳು.

6. ಆಗಬಾರದ ದುಶ್ ಕಾರ್ಯಗಳು ಆಗಿದ್ದಲ್ಲಿ ನಾಚಿಕೊಂಡು ಮನ, ವಚನ, ಕಾಯದೆ ಮೋಗದಿಂದ ಅದನ್ನು ಮತ್ತೆ ಮಾಡುವುದಿಲ್ಲವೆಂದು ಪ್ರತಿಜ್ಞೆ ತೆಗೆದುಕೊ.

7. ಒಂದು ವೇಳೆ ನೀನು ಸ್ವತಂತ್ರನಾಗಿದ್ದರೆ, ಸಂಸಾರ ಸಮಾಗಮದಲ್ಲಿ ಇಂದಿನ ದಿನವನ್ನು ಕೆಳಕಂಡಂತೆ ವಿಭಾಜಿಸು

| | | |
|---|---|---|
| 1 | ಪ್ರಹರ | ಭಕ್ತಿ ಕರ್ತವ್ಯ |
| 1 | ಪ್ರಹರ | ಧರ್ಮ ಕರ್ತವ್ಯ |
| 1 | ಪ್ರಹರ | ಆಹಾರ ಪ್ರಯೋಜನ |
| 1 | ಪ್ರಹರ | ವಿದ್ಯಾ ಪ್ರಯೋಜನ |
| 2 | ಪ್ರಹರ | ನಿದ್ರೆ |
| 2 | ಪ್ರಹರ | ಸಂಸಾರ ಪ್ರಯೋಜನ |
| 8 | ಪ್ರಹರ | = 24 ಘಂಟೆ |

(ಮೂರು ತಾಸಿಗೆ ಒಂದು ಪ್ರಹರ)

8. ಒಂದು ವೇಳೆ ನೀನು ತ್ಯಾಗಿಯಾಗಿದ್ದರೆ ತ್ವಚೆ ಇಲ್ಲದ ವನಿತೆಯ ಸ್ವರೂಪವನ್ನು ಚಿಂತನೆ ಮಾಡುತ್ತಾ ಸಂಸಾರದ ಕಡೆ ದೃಷ್ಟಿಬೀರು.

9. ಒಂದು ವೇಳೆ ನಿನಗೆ ಧರ್ಮದ ಅಸ್ತಿತ್ವದ ಬಗ್ಗೆ ಅನುಕೂಲತೆ ಕಾಣದಿದ್ದಲ್ಲಿ ಕೆಳ ಕಂಡಂತೆ ನಾನು ಹೇಳಿದ್ದನ್ನು ವಿಚಾರಿಸು

1. ನೀನು ಅನುಭವಿಸುತ್ತಿರುವ ಸ್ಥಿತಿಯು ಯಾವ ಪ್ರಮಾಣದಿಂದ ?

2. ಮರುದಿನದ ವಿಷಯ ಏಕೆ ತಿಳಿದು ಕೊಳ್ಳಲಾಗುತ್ತಿಲ್ಲ ?

3. ನೀನು ಏನು ಬಯಸುತ್ತಿಯೋ ಅದು ಏಕೆ ದೊರೆಯುತ್ತಿಲ್ಲ ?

4. ಚಿತ್ರ ವಿಚಿತ್ರತೆಯ ಪ್ರಯೋಜನ ಏನಿದೇ ?

10. ಒಂದು ವೇಳೆ ನಿನಗೆ ಅಸ್ತಿತ್ವ ಪ್ರಮಾಣಭೂತ ಕಂಡಲ್ಲಿ ಅದರ ಮೂಲ ತತ್ವದಲ್ಲಿ ಶಂಕೆ ಇದ್ದರೆ ಈ ಪ್ರಕಾರ ಕೆಳಗೆ ಹೇಳುವೇನು.

11. ಸರ್ವಪ್ರಾಣಿಗಳಲ್ಲಿ ಸಮದೃಷ್ಟಿ.

12. ಅಥವಾ ಯಾವ ಪ್ರಾಣಿಯನ್ನು ಜೀವನ ರಹಿತ ಮಾಡಬೇಡ ಅತಿಯಾದ ಭಾರವನ್ನು ಹೇರಬೇಡ, ಅವುಗಳಿಂದ, ಅವುಗಳ ಕ್ಷಮತೆ ಮೀರಿ ಕೆಲಸ ತೆಗೆದು ಕೊಳ್ಳಬೇಡ.

13. ಅಥವಾ ಸತ್ಪುರುಷರು ಯಾವ ಮಾರ್ಗವನ್ನು ಅನುಸರಿಸಿ ನಡೆದರೋ ಅದೆ ಮಾರ್ಗದಲ್ಲಿ ನಡೆ.

14. ಮೂಲತತ್ವದಲ್ಲಿ ಎಲ್ಲಿಯೂ ಭೇದವಿಲ್ಲ, ಕೇವಲ ದೃಷ್ಟಿಯಲ್ಲಿ ಭೇದವಿದೆ ಎಂದು ತಿಳಿದು, ಆಶಯವನ್ನರಿತು, ಪವಿತ್ರ ಧರ್ಮದಲ್ಲಿ ಪ್ರವರ್ತನ ಮಾಡು.

15. ನೀನು ಯಾವುದೆ ಧರ್ಮವನ್ನು ನಂಬುತ್ತಿದ್ದರು ಅದರ ಬಗ್ಗೆ ನನಗೆ ಪಕ್ಷಪಾತವಿಲ್ಲ. ಮಾತ್ರ ಹೇಳುವ ತಾತ್ಪರ್ಯವೇನೆಂದರೆ ಯಾವ ಮಾರ್ಗದಿಂದ ಸಂಸಾರ ಮಲ (ಅರಿಷಡ್ ವರ್ಗಗಳು) ನಷ್ಟ ಹೊಂದುವವೊ ಆ ಭಕ್ತಿ, ಆ ಧರ್ಮ ಮತ್ತು ಅಂತಹ ಸದಾಚಾರವನ್ನು ನೀನು ಪಾಲಿಸು.

16. ಎಷ್ಟೇ ಪರಾದಿನನಾದರೂ ಮನಸ್ಸಿನಿಂದ ಪವಿತ್ರತೆಯನ್ನು ವಿಸ್ಮರಣಗೊಳಿಸದೆ ಇಂದಿನ ದಿನವನ್ನು ರಮಣೀಯ ಮಾಡು.

17. ಇಂದು ನೀನು ದುಷ್ಕೃತ್ಯದಲ್ಲಿ ಎರಗುವದಾದರೆ ಮರಣವನ್ನು ಸ್ಮರಿಸು.

18. ಇಂದು ನಿನಗೆ ಅನ್ಯರನ್ನು ನೋಯಿಸುವ ಒಲವಿದ್ದರೆ, ನಿನ್ನ ಸುಖ ದುಃಖದ ಘಟನೆಗಳ ಪಟ್ಟಿಯನ್ನು ಒಮ್ಮೆ ಸ್ಮರಿಸು.

19. ಅರಸನೇ ಆಗಿರು ಅಥವಾ ಬಡವನಾಗಿರು - ಏನೇ ಆಗಿರು ಆದರೂ ಈ ವಿಚಾರ ವಿಚಾರಿಸಿ, ಸದಾಚಾರದ ಕಡೆಗೆ ಬನ್ನಿ. ಯಾಕೆಂದರೆ ಈ ದೇಹದ ಪುದ್ಗಲಗಳು ಸ್ವಲ್ಪ ಸಮಯದ ನಂತರ ಕೇವಲ ಮೂರುವರೆ ಮೊಳ ಭೂಮಿ ಬೇಡುವವು.

20. ನೀನು ಅರಸನಾಗಿದ್ದರೂ ಚಿಂತೆಯಿಲ್ಲ, ಆದರೆ ಪ್ರಮಾದ ಮಾಡಬೇಡ ಏಕೆಂದರೆ ನೀನು ನೀಚನಿಗಿಂತ ನೀಚ, ಅಧಮನಿಗಿಂತ ಅಧಮ, ವ್ಯಭಿಚಾರಿಯ, ಭ್ರೂಣಹತ್ಯೆಯ, ನಿರ್ವಂಶಕನ, ಚಂಡಾಲನ, ಕಟುಕನ, ವೇಶ್ಯೆಯರ, ಇಂಥವರ ಅನ್ನವನ್ನು ನೀನು ತಿನ್ನುತ್ತಿರುವಿ. ಹೀಗಿರುವಾಗ ಮುಂದೆ ?

21. ನೀನು ಪ್ರಜೆಗಳ ದುಃಖ, ಅನ್ಯಾಯ, ಆಯ್ಕರ, ಪರಿಶೀಲಿಸಿ ಅದನ್ನು ಸಿಮಿತ ಮಾಡು, ಹೇ ಅರಸನೆ ನೀನೂ ಕೂಡ ಮೃತ್ಯೂನಿನ ಮನೆಗೆ ಬಂದ ಅತಿಥಿ ಆಗಿರುವಿ.

22. ನೀನು ನ್ಯಾಯವಾದಿಯಾಗಿದ್ದರೆ ಇದರ ಅರ್ಥ ವಿಚಾರವನ್ನು ಮನನ ಮಾಡಿ ನೋಡು.

23. ಸಿರಿವಂತನಾಗಿದ್ದರೆ ಹಣದ ಉಪಯೋಗದ ಬಗ್ಗೆ ವಿಚಾರ ಮಾಡು. ಹಣ ಸಂಪಾದಿಸುವ ಕಾರಣ ಏನೆಂದು ಶೋಧಿಸಿ ಇಂದು ತಿಳಿಸು.

24. ದವಸ ಧಾನ್ಯಾದಿಗಳ ವ್ಯಾಪಾರದಿಂದ ಆಗುವ ಅಸಂಖ್ಯ ಹಿಂಸೆಯನ್ನು ಸ್ಮರಿಸುತ್ತಾ ನ್ಯಾಯ ಸಂಪನ್ನ ವ್ಯಾಪಾರದಲ್ಲಿ ಈ ದಿನ ನಿನ್ನ ಚಿತ್ತವನ್ನು ಕೇಂದ್ರೀಕರಿಸು.

25. ಒಂದು ವೇಳೆ ನೀನು ಕಟುಕನಾಗಿದ್ದರೆ ನಿನ್ನ ಜೀವದ

ಸುಖದ ಬಗ್ಗೆ ವಿಚಾರ ಮಾಡಿ ಇಂದಿನ ದಿವಸವನ್ನು ಪ್ರಾರಂಭಿಸು.

26. ಒಂದು ವೇಳೆ ನೀನು ತಿಳುವಳಿಕೆಯುಳ್ಳ ಬಾಲಕನಾಗಿದ್ದರೆ ವಿದ್ಯೆ ಹಾಗೂ ಆಜ್ಞೆಯ ಎಡೆಗೆ ದೃಷ್ಟಿಹಾಯಿಸು.

27. ಒಂದು ವೇಳೆ ನೀನು ಯುವಕನಾಗಿದ್ದರೆ, ಉದ್ಯಮ ಹಾಗೂ ಬ್ರಹ್ಮಚರ್ಯದೆಡೆಗೆ ದೃಷ್ಟಿಹಾಯಿಸು.

28. ಒಂದು ವೇಳೆ ನೀನು ವೃದ್ಧನಾಗಿದ್ದರೆ ಮೃತ್ಯುವಿನತ್ತ ದೃಷ್ಟಿ ಹಾಯಿಸಿ ಇಂದಿನ ದಿನದಲ್ಲಿ ಪ್ರವೇಶ ಮಾಡು.

29. ಒಂದು ವೇಳೆ ನೀನು ಸ್ತ್ರೀಯಾಗಿದ್ದರೆ ನಿನ್ನ ಪತಿಯೊಡನೆಯ ಧಾರ್ಮಿಕ ಕರ್ತವ್ಯವನ್ನು ಸ್ಮರಿಸು, ದೋಷ ಆಗಿದ್ದಲ್ಲಿ ಅದರ ಕ್ಷಮೆಯನ್ನು ಯಾಚಿಸು ಹಾಗೂ ಪರಿವಾರದ ಕಡೆ ದೃಷ್ಟಿ ಬೀರು.

30. ಒಂದು ವೇಳೆ ನೀನು ಕವಿಯಾಗಿದ್ದರೆ, ಅಸಂಭವಿತ ಪ್ರಶಂಸೆಯನ್ನು ಸ್ಮರಿಸುತ್ತಾ ಇಂದಿನ ದಿನದಲ್ಲಿ ಪ್ರವೇಶ ಮಾಡು.

31. ಒಂದು ವೇಳೆ ನೀನು ಜಿಪುಣನಾಗಿದ್ದರೆ –

32. ಒಂದು ವೇಳೆ ನೀನು ಅಧಿಕಾರದ ಅಮಲಿನಲ್ಲಿದ್ದರೆ ನೆಪೋಲಿಯನ್ ಬೋನಾಪಾರ್ಟ್‌ನ ಎರಡು ಸ್ಥಿತಿಗಳನ್ನು ಜ್ಞಾಪಿಸಿಕೊ.

33. ನಿನ್ನೆಯ ದಿವಸದಲ್ಲಿ ಯಾವುದಾದರೂ ಕಾರ್ಯ ಅರ್ಧಕ್ಕೆ ಬಿಟ್ಟಿದ್ದರೆ ಅದನ್ನು ಪೂರ್ಣ ಮಾಡುವ ಸುವಿಚಾರ ಮಾಡಿ ಇಂದಿನ ದಿನದಲ್ಲಿ ಪ್ರವೇಶ ಮಾಡು.

34. ಇಂದು ಯಾವುದಾದರೂ ಕಾರ್ಯವನ್ನು ಪ್ರಾರಂಭ

ಮಾಡುವ ಇಚ್ಛೆ ಇದ್ದರೆ, ವಿವೇಕದಿಂದ, ಸಮಯ, ಶಕ್ತಿ ಹಾಗೂ ಪರಿಣಾಮ ವಿಚಾರಿಸಿ ಇಂದಿನ ದಿನದಲ್ಲಿ ಪ್ರವೇಶ ಮಾಡು.

35. ಹೆಜ್ಜೆ ಇಟ್ಟರೆ ಪಾಪವುಂಟು, ನೋಡುವ ನೋಟದಲ್ಲಿ ವಿಷವುಂಟು ತಲೆಯ ಮೇಲೆ ಮರಣವುಂಟು ಇದನ್ನು ವಿಚಾರಿಸಿ ಇಂದಿನ ದಿನದಲ್ಲಿ ಪ್ರವೇಶ ಮಾಡು.

36. ಈ ದಿನ ನೀನು ಅಘೋರ ಕರ್ಮದಲ್ಲಿ (ಕಾರ್ಯದಲ್ಲಿ) ಪ್ರವೃತ್ತನಾಗಬೇಕಾಗಿದ್ದರೆ ನೀನು ರಾಜಪುತ್ರನಾಗಿದ್ದರೂ ಸಹಿತ ಭಿಕ್ಷಾಚಾರ್ಯಕ್ಕೆ ಮಾನ್ಯತೆ ನೀಡಿ ಇಂದಿನ ದಿನದಲ್ಲಿ ಪ್ರವೇಶ ಮಾಡು (ಅಂದರೆ ಅನುಚಿತ ಕರ್ಮ ಮಾಡುವದಕ್ಕಿಂತ ತ್ಯಾಗ ಮಾಡಿ ಭಿಕಾರಿಯಾಗುವುದು ಲೇಸು).

37. ನೀನು ಭಾಗ್ಯವಂತನಾಗಿದ್ದರೆ ನಿನ್ನ ಭಾಗ್ಯದ ಆನಂದದಿಂದ ಅನ್ಯರನ್ನು ಭಾಗ್ಯವಂತರಾಗಿ ಮಾಡು. ಆದರೆ ನೀನು ನಿರ್ಭಾಗಿಯಾಗಿದ್ದಲ್ಲಿ ಅನ್ಯರಿಗೆ ಕೆಡುಕು ಮಾಡುವ ವಿಚಾರವನ್ನು ತ್ಯಜಿಸಿ ಇಂದಿನ ದಿನದಲ್ಲಿ ಪ್ರವೇಶ ಮಾಡು.

38. ನೀನು ಧರ್ಮಾಧ್ಯಕ್ಷನಾಗಿದ್ದರೆ ನಿನ್ನ ಅನುಚಿತ ಕಾರ್ಯದ ಕಡೆ ಕಟಾಕ್ಷದೃಷ್ಟಿ ಬೀರಿ ಇಂದಿನ ದಿನದಲ್ಲಿ ಪ್ರವೇಶ ಮಾಡು.

39. ನೀನು ಸೇವಕನಾಗಿದ್ದರೆ ನಿನ್ನ ಅತಿ ಪ್ರೀಯವಾದ ಈ ಶರೀರವನ್ನು ಪೋಷಿಸುವ ನಿನ್ನ ಮಾಲಿಕನೊಡನೆ ಉಪ್ಪುಂಡ ಮನೆಗೆ ಎರಡು ಬಗೆಯಲಾರೆನು ಎಂದು ಇಚ್ಛಿಸಿ ಇಂದಿನ ದಿನದಲ್ಲಿ ಪ್ರವೇಶಮಾಡು.

40. ನೀನು ದುರಾಚಾರಿಯಾಗಿದ್ದಲ್ಲಿ ನಿನ್ನ ಆರೋಗ್ಯ ಭಯ ಪರಾಧಿನತೆ ಸ್ಥಿತಿ ಹಾಗೂ ಸುಖದ ಬಗ್ಗೆ ವಿಚಾರಿಸುತ್ತಾ ಇಂದಿನ ದಿನದಲ್ಲಿ ಪ್ರವೇಶ ಮಾಡು.

41. ನೀನು ದುಃಖಿಯಾಗಿದ್ದಲ್ಲಿ ಇಂದಿನ ಆದಾಯದ ಜೀವನಕ್ಕಾಗುವಷ್ಟೆ ಆಶೆ ಇಟ್ಟುಕೊಂಡು ಇಂದಿನ ದಿನದಲ್ಲಿ ಪ್ರವೇಶಮಾಡು.

42. ನೀನು ಧರ್ಮಕಾರ್ಯರತನಾಗಲು ಅವಶ್ಯ ಬಿಡುವು ಮಾಡಿಕೊಂಡು ಇಂದಿನ ದಿನದ ವ್ಯವಹಾರ ಸಿದ್ಧಿಯಲ್ಲಿ ಪ್ರವೇಶ ಮಾಡು.

43. ಒಂದು ವೇಳೆ ಪ್ರಥಮ ಪ್ರವೇಶದಲ್ಲಿ ಅನುಕೂಲತೆ ಯಾಗದಿದ್ದಲ್ಲಿ ನಿತ್ಯ ಕಳೆಯುತ್ತಿರುವ ದಿನದ ಸ್ವರೂಪದ ವಿಚಾರ ಮಾಡಿ, ಈ ದಿನ ಯಾವಾಗಲಾದರೂ ಆ ಪವಿತ್ರ ವಸ್ತುವಿನ ಮನನ ಮಾಡು.

44. ಆಹಾರ, ವಿಹಾರ, ನಿಹಾರ, ಇದಕ್ಕೆ ಸಂಬಂಧಿಸಿದ ನಿನ್ನ ವೈಯಕ್ತಿಕ ಪ್ರಕ್ರಿಯೆಗಳನ್ನು ಶೋಧಿಸಿ ಇಂದಿನ ದಿನದಲ್ಲಿ ಪ್ರವೇಶ ಮಾಡು.

45. ನೀನು ಕಸಬುದಾರನಾಗಿದ್ದರೆ ಆಲಸ್ಯ ಹಾಗೂ ಶಕ್ತಿಯ ಮರುಪಯೋಗದ ಬಗ್ಗೆ ವಿಚಾರ ಮಾಡಿ ಇಂದಿನ ದಿನದಲ್ಲಿ ಪ್ರವೇಶ ಮಾಡು.

46. ನೀನು ಯಾವುದೇ ವೃತ್ತಿಯಲ್ಲಿದ್ದರೂ ಕೂಡ ಉಪಜೀವನಕ್ಕಾಗಿ ಅನ್ಯಾಯದಿಂದ ಸಂಪಾದಿಸಿದ ಹಣದ ಉಪಾರ್ಜನೆ ಮಾಡಬೇಡ.

47. ಈ ಸ್ಮೃತಿಗಳನ್ನು ಗ್ರಹಿಸಿದನಂತರ ಶೌಚ ಕ್ರಿಯಾಯುಕ್ತನಾಗಿ

ಭಗ್ವದ್ ಭಕ್ತಿಯಲ್ಲಿ ಲೀನವಾಗಿ ಕ್ಷಮೆಯನ್ನು ಯಾಚಿಸು.

48. ಸಂಸಾರ ಪ್ರಯೋಜನದಲ್ಲಿ ನಿನ್ನ ಲಾಭಾರ್ಥಕ್ಕಾಗಿ ನೀನು ಇತರ ಸಮುದಾಯಗಳಿಗೆ ತೊಂದರೆ ಮಾಡುತ್ತಿದ್ದರೆ ನಿಲ್ಲಿಸು.

49. ಕಾಡಿಸುವ, ಕಾಮುಕ, ತಿಳಿಗೇಡಿಗೆ ಪ್ರೋತ್ಸಾಹ ನೀಡುತ್ತಿದ್ದರೆ ನಿಲ್ಲಿಸು.

50. ಕನಿಷ್ಠ ಪಕ್ಷ ಅರ್ಧಪ್ರಹರ (90 ನಿಮಿಷ) ಧರ್ಮಕರ್ತವ್ಯ ಹಾಗೂ ವಿದ್ಯಾ ಸಂಪತ್ತಿನ ಸಲುವಾಗಿ ಮೀಸಲಿಡು.

51. ಜೀವನ ಅತಿ ಅಲ್ಪ ಮತ್ತು ಪ್ರಾಪಂಚಿಕ ಜಂಜಾಟ ಬಹು ವಿಸ್ತಾರವಾಗಿದೆ. ಆದ್ದರಿಂದ ಪ್ರಾಪಂಚಿಕ ಜಲಜಾಟವನ್ನು ಕಡಿಮೆ ಮಾಡಿದಾಗ ಸುಖದಿಂದ ಕೂಡಿದ ದೀರ್ಘ ಮತ್ತು ಯೋಗ್ಯ ಜೀವನ ನಿನ್ನದಾಗುವುದು.

52. ಸ್ತ್ರೀ, ಪುತ್ರ, ಪರಿವಾರ, ಲಕ್ಷ್ಮೀ ಮುಂತಾದ ಎಲ್ಲಾ ಸುಖ ಸಮೃದ್ಧಿ ನಿನ್ನ ಮನೆಯಲ್ಲಿದ್ದರೂ ಕೂಡಾ ಆ ಸುಖದಲ್ಲಿ ಗೌಣ ರೂಪದಲ್ಲಿ ದುಃಖವೂ ಅಡಗಿದೆ ಎಂದು ತಿಳಿದು ಇಂದಿನ ದಿನದಲ್ಲಿ ಪ್ರವೇಶ ಮಾಡು.

53. ಪವಿತ್ರತೆಯ ಮೂಲ ಸದಾಚಾರವಾಗಿದೆ.

54. ಮನಸ್ಸು ಎರಡು ಲಹರಿಯಲ್ಲಿ ಚಲಿಸುವುದನ್ನು ನಿಯಂತ್ರಿಸಲು.

55. ವಚನ ಶಾಂತ, ಮಧುರ, ಕೋಮಲ, ಸತ್ಯ ಮತ್ತು ಶೌಚ (ಸುವಿಚಾರ) ದಿಂದ ಮಾತಾಡುವ ಸಾಮಾನ್ಯ ಪ್ರತಿಜ್ಞೆ ಮಾಡಿ ಇಂದಿನ ದಿನದಲ್ಲಿ ಪ್ರವೇಶ ಮಾಡು.

56. ದೇಹವು ಮಲಮೂತ್ರದ ಅಸ್ತಿತ್ವವಾಗಿದೆ. ಅದಕ್ಕೋಸ್ಕರ

ನಾನು ಇದೆಂತಹ ಅಯೋಗ್ಯ ಪ್ರಯೋಜನ ಮಾಡಿ ಆನಂದಿಸುತ್ತಿದ್ದೇನೆ ಎಂದು ಇಂದು ವಿಚಾರಿಸು.

57. ನಿನ್ನ ಕೈಯಿಂದ ಯಾರದಾದರೂ ಉಪಜೀವನವು ಒಡೆಯುವದಾದರೆ

58. ಆಹಾರ ಕ್ರಿಯೆಯಲ್ಲಿ ಇನ್ನು ನೀನು ಪ್ರವೇಶಿಸಿದೆ. ಮಿತಾಹಾರಿ (ಅಲ್ಪಾಹಾರಿ) ಅಕ್ಬರ್ ಸರ್ವೋತ್ತಮ ಬಾದಶಾಹನೆಂದು ಪರಿಗಣಿಸಲ್ಪಟ್ಟಿದ್ದಾನೆ.

59. ಇಂದು ನಿನಗೆ ಹಗಲಲ್ಲಿ ನಿದ್ರಿಸುವ ಬಯಕೆ ಏನಾದರೂ ಆದರೆ ಆಗ ಆ ಸಮಯದಲ್ಲಿ ಈಶ್ವರ ಭಕ್ತಿಯಲ್ಲಿ ಲೀನನಾಗು ಅಥವಾ ಸತ್‌ಶಾಸ್ತ್ರದ ಲಾಭ ಪಡೆ.

60. ಈ ತರಹ ಆಗುವದು, ಕಷ್ಟವೆಂದು ನನಗೆ ಅರ್ಥವಾಗುತ್ತದೆ. ಆದರೆ ಅಭ್ಯಾಸವೇ ಎಲ್ಲದರ ಉಪಾಯ.

61. ನಡೆದು ಕೊಂಡು ಬಂದ ವೈರತ್ವವನ್ನು ಇಂದೇ ನಿರ್ಮೂಲನ ಗೋಳಿಸಿದರೆ ಉತ್ತಮ, ಇಲ್ಲವಾದರೆ ಅದರ ಬಗ್ಗೆ ಎಚ್ಚರಿಕೆ ವಹಿಸು.

62. ಹಾಗೆ ಹೊಸ ವೈರತ್ವ ಬೆಳೆಸಬೇಡ, ಕಾರಣ ವೈರ ಮಾಡಿ ಎಷ್ಟು ಕಾಲ ಸುಖವಾಗಿರುವೆವು ಎಂಬ ವಿಚಾರವನ್ನು ತತ್ವ ಜ್ಞಾನಿಗಳು ಮಾಡುತ್ತಾರೆ.

63. ಅತ್ಯಂತ ಪಾಪಮಯವಾದ ಮಹಾ ಆರಂಭ ಹಿಂಸಾಯುಕ್ತ ವ್ಯಾಪಾರದಲ್ಲಿ ಇಂದು ತೊಡಗಬೇಕಾಗಿದ್ದರೆ ಅದಕ್ಕೆ ಕಡಿವಾಣ ಹಾಕು.

64. ಯಾರದೋ ಜೀವನ ಹಾನಿಯಾಗುವುದರಿಂದ ವಿಪುಲ

ಧನ ಪ್ರಾಪ್ತಿಯಾಗುತ್ತಿದ್ದರೆ ಮುಂದಕ್ಕೆ ಸಾಗಬೇಡ.

65. ಸಮಯ ಅಮೂಲ್ಯವಿದೆ ಈ ಮಾತನ್ನು ವಿಚಾರಿಸಿ ಇಂದಿನ ದಿನದ 2,16,000 ವಿಪಳಗಳನ್ನು ಉಪಯೋಗಿಸು.

66. ವಾಸ್ತವಿಕ ಸುಖ ಕೇವಲ ವಿರಕ್ತಿಯಲ್ಲಿ ನೆಲೆಸಿದೆ. ಆದ್ದರಿಂದ ಆಂತರಿಕ ಮೋಹವನ್ನು ಇಂದಿನ ಪ್ರಾಪಂಚಿಕ ಮೋಹಕ್ಕೆ ಎಳೆಯ ಬೇಡ.

67. ವಿರಾಮದ ದಿನವಿದ್ದರೆ ಹಿಂದೆ ಹೇಳಿದ ಸ್ವಾತಂತ್ರ್ಯದ ಪ್ರಕಾರವೇ ಸಾಗು.

68. ಯಾವುದೇ ಪ್ರಕಾರದ ನಿಷ್ಪಾಪದ ಆಟ ಅಥವಾ ಅನ್ಯ ಯಾವುದಾದರೂ ನಿಷ್ಪಾಪಿ ಸಾಧನ ಇಂದಿನ ಮನೋರಂಜನೆಗಾಗಿ ಹುಡುಕು.

69. ಸತ್ಕಾರ್ಯ ಮಾಡುವ ಭಾವನೆ ಇದ್ದರೆ ಇಂದು ವಿಳಂಬ ಮಾಡುವುದು ಉಚಿತವಲ್ಲ, ಯಾಕೆಂದರೆ ಇಂದಿನ ದಿನದಂತಹ ಮಂಗಳಕರವಾದ ದಿನ ಬೇರೊಂದು ಇಲ್ಲ.

70. ನೀನು ಅಧಿಕಾರಿಯಾಗಿದ್ದರೂ ಕೂಡ ಪ್ರಜೆಗಳ ಹಿತವನ್ನು ಕಾಪಾಡಲು ಮರೆಯಬೇಡ. ಯಾಕೆಂದರೆ ಯಾವ (ರಾಜನ) ಶಾಸಕನ ಉಪ್ಪು ನೀನು ತಿನ್ನುತ್ತಿರುವಿಯೋ ಅವನೂ ಕೂಡ ಪ್ರಜೆಗಳಿಂದ ಒಪ್ಪಿಗೆ ಪಡೆದ ಸೇವಕನಿದ್ದಾನೆ.

71. ವ್ಯವಹಾರಿಕ ಪ್ರಯೋಜನದಲ್ಲಿ ಕೂಡ ಪೂರ್ಣ ಉಪಯೋಗದಿಂದ ವಿವೇಕಿಯಾಗಿರುವೆ, ಎನ್ನುವ ಸತ್‌ಪ್ರತಿಜ್ಞೆಯೊಂದಿಗೆ ಇಂದಿನ ದಿನದಲ್ಲಿ ವರ್ತಿಸು.

72. ಸಾಯಂಕಾಲ ಆದನಂತರ ವಿಶೇಷವಾದ ಶಾಂತಿಯನ್ನು ಧಾರಣೆ ಮಾಡು.

73. ಇಂದಿನ ದಿನ ಈ ಕೆಳಗೆ ಹೇಳಿದ ವಿಷಯಗಳಿಗೆ ಯಾವುದೇ ತರಹದ ಅಡಚಣೆ ಆಗದಿದ್ದಲ್ಲಿ ಅದೇ ವಾಸ್ತವವಾದ ಜಾಣತನ ಎಂದು ಅರ್ಥ 1. ಆರೋಗ್ಯ 2. ಮಹತ್ತೆ 3. ಪವಿತ್ರತೆ 4. ಕರ್ತವ್ಯ

74. ಇಂದು ನಿನ್ನಿಂದ ಯಾವುದೇ ಮಹತ್ಕಾರ್ಯವಾಗುತ್ತಿದ್ದರೆ ನಿನ್ನ ಸರ್ವಸುಖಗಳನ್ನು ಕೂಡ ಅರ್ಪಣೆ ಮಾಡಿ ಬಿಡು.

75. ಸಾಲ ಕಸ ಇದ್ದಂತೆ. ಸಾಲ ಎಂಬುದು ಯಮನ ಕೈಯಿಂದ ಬಿದ್ದಿರುವ ವಸ್ತು (ಕೈ ಸ್ಪರ್ಷದ ವಸ್ತು) ಸಾಲ, ರಾಕ್ಷಸ ರಾಜನ ನಿರ್ದಯಾತ್ಮಕ ವಸೂಲುಗಾರ, ನಿನ್ನ ತಲೆಯ ಮೇಲೆ ಅಂತಹ ಸಾಲವಿದ್ದರೆ ಇಂದೇ ಅದರಿಂದ ಮುಕ್ತನಾಗು ಹಾಗೂ ಹೊಸ ಸಾಲನ್ನು ಮಾಡುವುದು ನಿಲ್ಲಿಸು.

76. ದೈನಂದಿನ ಕಾರ್ಯಗಳ ಅಂಕ ಪಟ್ಟಿಯನ್ನು ಈಗ ವೀಕ್ಷಿಸುತ್ತ ಹೋಗು.

77. ಬೆಳಿಗ್ಗೆ ಎಚ್ಚರಿಕೆ ಕೊಟ್ಟಾಗಿದ್ದಾಗ್ಯೂ ಏನಾದರೂ ಅಯೋಗ್ಯವಾಗಿದ್ದರೆ ಪಶ್ಚಾತ್ತಾಪ ಮಾಡು ಮತ್ತು ಅದರ ಬಗ್ಗೆ ಶಿಕ್ಷೆ ಗ್ರಹಿಸು.

78. ಏನಾದರೂ ಪರೋಪಕಾರ, ದಾನ, ಲಾಭ ಅಥವಾ ಅನ್ಯರಿಗೆ ಉಪಕಾರ ಮಾಡಿ ಬಂದಿದ್ದರೆ ಆನಂದ ಪಡು. ಆತ್ಮ ಪ್ರಶಂಸೆಯಿಂದ ಬೀಗ ಬೇಡ.

79. ಅರಿತು ಅರಿಯದೆಯೋ ವಿಪರೀತವಾಗಿದ್ದರೆ ಇನ್ನು ಮುಂದೆ ಆಗದಂತೆ ನಿಲ್ಲಿಸು.

80. ವ್ಯವಹಾರದಲ್ಲಿ ನಿಯಮಿತನಾಗು ಹಾಗೂ ವಿರಾಮದ

ವೇಳೆಯಲ್ಲಿ ಸಂಸಾರದ ನಿವೃತ್ತಿಯನ್ನು ಶೋಧಿಸು.

81. ಇಂದು ಎಂತಹ ಉತ್ತಮ ದಿನವನ್ನು ಅನುಭವಿಸಿರುವಯೋ ಅದರಂತೆಯೇ ನಿನ್ನ ಜೀವನ ಪರ್ಯಂತ ಸಂತೋಷವಾಗಿರಲು ಆನಂದಮಯನಾಗು ಅದೇ ಜೀವನದ ಸಾರ್ಥಕತೆ.

82. ಇಂದು ನೀನು ಯಾವ ಕ್ಷಣದಿಂದ ನನ್ನ ಕಥೆಯನ್ನು ಮನನ ಮಾಡುತ್ತಿರುವಿಯೋ ಅದೇ ನಿನ್ನ ಆಯುಷ್ಯದ ಉತ್ತಮ ಕ್ಷಣವೆಂದು ತಿಳಿದು ಸತ್ಕಾರ್ಯದ ಕಡೆ ಅಭಿಮುಖನಾಗು.

83. ಸತ್ಪುರಷ ವಿದುರರು ಹೇಳಿದ ಪ್ರಾಕಾರ ಇಂದು ಅಂತಹ ಕಾರ್ಯವನ್ನು ಮಾಡು, ಅದರಿಂದ ರಾತ್ರಿ ಸುಖ ಪೂರ್ವಕ ನಿದ್ರಿಸುವಂತಹದು.

84. ಇಂದಿನ ದಿನ ಸುವರ್ಣದಿನ, ಪವಿತ್ರ ದಿನ, ಕೃತ ಕೃತ್ಯನಾಗಲು ಯೋಗ್ಯವಾದ ದಿನವೆಂದು ಜ್ಞಾನಿಗಳು ನುಡಿದಿದ್ದಾರೆ. ಆದನ್ನು ನೀನು ಗೌರವಿಸು..

85. ಸಾಧ್ಯವಾದಷ್ಟು ಇಂದಿನ ದಿನ ನಿನ್ನ ಸ್ವಂತ ಪತ್ನಿಯಿಂದಲೂ ಕೂಡ ಇಂದ್ರಿಯಾಸಕ್ತನಾಗದಿರು.

86. ಆತ್ಮ ಹಾಗೂ ದೇಹ ಶಕ್ತಿಯ ದಿವ್ಯತೆಯ ಮೂಲವಿದು ಇದು ಜ್ಞಾನಿಗಳ ಅನುಭವಸಿದ್ಧ ವಚನ.

87. ನಿನ್ನಲ್ಲಿ ತಂಬಾಕು ಸೇವನೆಯಂತಹ ಸಣ್ಣ ಚಟವಿದ್ದರೂ ಇಂದು ಅದನ್ನು ತ್ಯಜಿಸು, ಹೊಸ ಚಟಕ್ಕೆ ಬಲಿಯಾಗಬೇಡ.

88. ಈ ಮುಂಜಾನೆಯ ಸಮಯದಲ್ಲಿ ಎಲ್ಲಾ ಮನುಷ್ಯರು ತಮ್ಮ ಶಕ್ತಿಯ ಅನುಸಾರವಾಗಿ ದೇಶ, ಕಾಲ ಹಾಗೂ ಮಿತ್ರ ಇತ್ಯಾದಿ ವಿಷಯಗಳ ಬಗ್ಗೆ ವಿಚಾರ ಮಾಡುವುದು

ಉಚಿತ.

89. ಇಂದು ಎನಗೆ ಎಂತಂಹ ಸಂತ ಪುರುಷರ ಸಮಾಗಮ ವಾಯಿತು ಮತ್ತು ವಾಸ್ತವಿಕ ಆನಂದ ಸ್ವರೂಪ ಏನು ತಿಳಿಯಿತು ? ಇಂತಹ ಚಿಂತನೆ ವಿರಳ ಪುರುಷರು ಮಾಡುತ್ತಾರೆ.

90. ನೀನು ಭಯಂಕರವಾದ ಸತ್ಕಾರ್ಯದಲ್ಲಿ ಇಂದು ತೊಡಗಿದ್ದರೆ ಅಂಜಬೇಡ.

91. ಶುದ್ಧ ಸಚ್ಚಿದಾನಂದ ಕರುಣಾಮಯಿ ಪರಮೇಶ್ವರನ ಭಕ್ತಿಯೇ ನಿನ್ನ ಇಂದಿನ ಸತ್ಕಾರ್ಯದ ಜೀವನ.

92. ನಿನ್ನ ಪರಿವಾರದ, ಮಿತ್ರನ, ಪುತ್ರನ, ಹೆಂಡತಿಯ, ತಂದೆ, ತಾಯಿಯರ, ಗುರುವಿನ, ವಿದ್ವಾನನ, ಸತ್ಪುರುಷನ, ಯಥಾಶಕ್ತಿ ಹಿತ, ಸನ್ಮಾನ ವಿನಯ, ಲಾಭದ ಕರ್ತವ್ಯ ನಡೆದಿದ್ದರೆ, ಅದೇ ಇಂದಿನ ದಿವಸದ ಸುಗಂಧ.

93. ಯಾರ ಮನೆಯಲ್ಲಿ ಇಂದಿನ ದಿವಸ ಕ್ಲೇಶ, ಮುಕ್ತ ವಾತಾವರಣವಿದ್ದು ಸ್ವಚ್ಛತೆಯಿಂದ (ಶೌಚದಿಂದ). ಒಗ್ಗಟ್ಟಿನಿಂದ, ತೃಪ್ತಿಯಿಂದ, ಶಾಂತಿಯಿಂದ, ಪ್ರೀತಿಯಿಂದ, ಸಂತೋಷದಿಂದ, ಸೌಮ್ಯತೆಯಿಂದ, ಸ್ನೇಹದಿಂದ, ಸಭ್ಯತೆಯಿಂದ, ಸುಖದಿಂದ ನೆಲೆಸಿರುತ್ತದೆಯೋ ಅಂತಹ ಮನೆಯಲ್ಲಿ ಪವಿತ್ರತೆ ನೆಲೆಸಿರುತ್ತದೆ.

94. ಕುಶಲ ಹಾಗೂ ಆಜ್ಞಾಪಾಲಕ ಪುತ್ರರು, ಆಜ್ಞಾವಲಂಬಿ ಧರ್ಮಯುಕ್ತ ಅನುಚರರು, ಗುಣಸಂಪನ್ನ ಹೆಂಡತಿ ಒಗ್ಗಟ್ಟಾದ ಪರಿವಾರ, ಸತ್ಪುರುಷನಂತಹ ತನ್ನ ಸ್ಥಿತಿ ಯಾವ ಪುರುಷನಲ್ಲಿರುವುದೋ, ಅವನ ಇಂದಿನ ದಿವಸ

ನಮ್ಮೆಲ್ಲರಿಗೂ ವಂದನೀಯವಾಗಿದೆ.

95. ಈ ಎಲ್ಲಾ ಲಕ್ಷಣಗಳನ್ನು ಅಳವಡಿಸಿಕೊಳ್ಳಲು ಯಾವ ಪುರುಷನು ತನ್ನ ವಿಚಕ್ಷಣತೆಯಿಂದ ಪ್ರಯತ್ನ ಮಾಡುತ್ತಾನೆ, ಅವನ ದಿವಸ ನಮ್ಮೆಲ್ಲರಿಗೂ ಒಪ್ಪುವಂತಹದಾಗಿದೆ.

96. ಇದರ ವಿರುದ್ಧವಾದ ವರ್ತನೆ ಎಲ್ಲಿ ನಡೆದಿರುತ್ತದೆಯೋ ಆ ಮನೆಯೇ ನಮ್ಮ ಕಟಾಕ್ಷ ದೃಷ್ಟಿಯ ರೇಖೆಯಾಗಿದೆ.

97. ನಿನ್ನ ಜೀವನಾಂಶಕ್ಕೆ ಆಗುವಷ್ಟೆ ಸಂಪಾದಿಸುತ್ತಿದ್ದು ಸಂತೋಷಮಯವಾಗಿ ಜೀವಿಸುತ್ತಿದ್ದರೆ, ಆ ಹಗರಣ ತುಂಬಿದ್ದ ರಾಜಸುಖವನ್ನು ಇಚ್ಛಿಸಿ ನಿನ್ನ ಇಂದಿನ ದಿನ ಅಪವಿತ್ರಗೊಳಿಸಬೇಡ.

98. ನಿನಗೆ ಯಾರಾದರೂ ಕಟುವಚನ ನುಡಿದಿದ್ದರೆ, ಆ ಸಮಯದಲ್ಲಿ ಸಹನಶೀಲತೆ ನಿರುಪಯೋಗಿ ಆದರೆ (ಅದರ ಬಗ್ಗೆ ಮುಂದೆ ಯೋಚಿಸು).

99. ಬೆಳಿಗ್ಗೆ ಮಾಡಿರುವ ತಪ್ಪಿಗೆ ರಾತ್ರಿ ನೀನೇ ಸ್ವತಃ ನಗು. ಆದರೆ ಮತ್ತೆ ಈ ತರಹದ ನಗು ಬರದಿರುವಂತೆ ಎಚ್ಚರದಿಂದ ಇರು.

100. ಇಂದು ಏನಾದರೂ ಪ್ರಜ್ಞಾಶಕ್ತಿಯನ್ನು ವೃದ್ಧಿಸಿದ್ದರೆ, ಆತ್ಮಿಕ ಶಕ್ತಿ ಬೆಳಗಿಸಿಕೊಂಡಿದ್ದರೆ, ಪವಿತ್ರ ಕೃತ್ಯವನ್ನು ಹೆಚ್ಚಿಸಿಕೊಂಡಿದ್ದರೆ (ಅದಕ್ಕಾಗಿ ಆನಂದ ಅನುಭವಿಸು).

101. ಅಯೋಗ್ಯ ರೀತಿಯಿಂದ ಇಂದು ನಿನ್ನ ಯಾವುದೇ ಶಕ್ತಿಯ ಉಪಯೋಗವನ್ನು ಮಾಡಬೇಡ, ನಿನ್ನ ಮರ್ಯಾದೆ ಮಿತಿಯನ್ನು ಉಲ್ಲಂಘಿಸಿ ಮಾಡಲೇ ಬೇಕಾದರೆ ಪಾಪದ ಭಯವುಳ್ಳವನಾಗಿರು.

102. ಸರಳತೆ ಇದು ಧರ್ಮದ ಬಿತ್ತನೆ ಬೀಜ ಸ್ವರೂಪವಾಗಿದೆ. ಪ್ರಜ್ಞೆಯಿಂದ ಸರಳತೆಯನ್ನು ಸೇವಿಸಿದ್ದರೆ ಇಂದಿನ ದಿನ ಸರ್ವೋತ್ತಮವಾಗಿದೆ.

103. ಹೇ ತಂಗಿ ! ನೀನು ರಾಜಪತ್ನಿಯಾಗಿದ್ದರೂ ಸರಿ, ಅಥವಾ ಬಡವನ ಪತ್ನಿಯಾಗಿದ್ದರೂ ಸರಿ, ನಾನು ಅದನ್ನು ಲೆಕ್ಕಿಸುವುದಿಲ್ಲ. ಮರ್ಯಾದೆಯಿಂದ ನಡೆದು ಕೊಳ್ಳುವ ಹೆಂಗಸರನ್ನು ನಾನೇನು ಆದರೆ ಪವಿತ್ರ ಜ್ಞಾನಿಗಳೂ ಪ್ರಶಂಸಿಸಿದ್ದಾರೆ.

104. ನಿನ್ನ ಸದ್ಗುಣಗಲ ಕಾರಣದಿಂದ ಇಡೀ ಪ್ರಪಂಚವೇ ನಿಷ್ಕಪಟ ಪ್ರಶಂಸೆ ತೋರುತ್ತಿದೆ ಎಂದರೆ ಹೇ ತಂಗಿ ನಾನು ನಿನಗೆ ನಮಸ್ಕರಿಸುತ್ತೇನೆ.

105. ಆದರಪೂರ್ವಕ ನಮ್ರತೆ, ಪರಿಶುದ್ಧ ಅಂತಃಕರಣದಿಂದ ಪರಮಾತ್ಮನ ಗುಣಗಳ ಚಿಂತನೆ, ಶ್ರವಣ, ಮನನ, ಕೀರ್ತನೆ ಪೂಜಾರ್ಚನೆಗಳನ್ನು ಜ್ಞಾನಿ ಪುರುಷರು ತುಂಬಾ ಹೊಗಳಿದ್ದಾರೆ. ಇವುಗಳಿಂದ ಈ ದಿನವನ್ನು ಸುಂದರಗೊಳಿಸು.

106. ಸತ್‌ಶೀಲವಂತನು ಸುಖಿಯಾಗಿದ್ದಾನೆ ಹೀನಾಚಾರಿ ದುಃಖಿಯಾಗಿದ್ದಾನೆ, ಈ ಮಾತಿನಲ್ಲಿ ವಿಶ್ವಾಸವಿಲ್ಲದಿದ್ದರೆ ಈ ಕ್ಷಣದಿಂದಲೇ ನೀವೂ ಈ ಮಾತು ಲಕ್ಷದಲ್ಲಿಟ್ಟು ಚಿಂತನೆ ಮಾಡಿ ನೋಡಿರಿ.

107. ಈ ಎಲ್ಲಾ ವಿಷಯಗಳ ಸರಳ ಉಪಾಯವನ್ನು ಇಂದು ಹೇಳಿ ಬಿಡುವೆನು ಅದೇನೆಂದರೆ ದೋಷಗಳನ್ನು ತಿಳಿದು ದೋಷಗಳನ್ನು ಅಳಿಸು.

108. ವಿಸ್ತಾರವಾಗಿ, ಸಂಕ್ಷಿಪ್ತವಾಗಿ ಅಥವಾ ಕ್ರಮಾನುಕ್ರಮವಾಗಿ

ಯಾವುದೇ ಸ್ವರೂಪದಲ್ಲಾಗಲೀ, ನಾನು ಹೇಳಿದ ಪವಿತ್ರವಾಹ ಹೂಗಳಿಂದ ಹೆಣೆಯಲ್ಪಟ್ಟ ಈ ಮಾಲೆಯನ್ನು ಬೆಳಗಿನ ಜಾವದಲ್ಲಿ, ಸಂಜೆಯ ಸಮಯದಲ್ಲಿ ಅಥವಾ ಅನ್ಯ ಅನುಕೂಲಕರ ವಿರಾಮದ ವೇಳೆಯಲ್ಲಿ ಚಿಂತನೆ ಮತ್ತು ಮನನ ಮಾಡಿದರೆ ಮಂಗಳವಾಗುವುದು ವಿಶೇಷ ಇನ್ನೇನನ್ನು ಹೇಳಲಿ ?

ವಿಶೇಷ ಇನ್ನೇನು ಹೇಳಲಿ ?

## ವರ್ಧಮಾನ್ ಭಾರತೀರವರ ಅತೀ ಪ್ರಸಿದ್ಧ ಕನ್ನಡದ ಜೈನ್ ಮತ್ತು ಇತರೆ ಕ್ಯಾಸೆಟ್‌ಗಳು

1. ಶ್ರೀ ಭಕ್ತಾಮರ ಸ್ತೋತ್ರ-ಪ್ರೊ. ಪ್ರತಾಪ್ ಕುಮಾರ್ ಟೋಲಿಯಾ, ವಿದ್ವಾನ್ ಕೃಷ್ಣಮೂರ್ತಿ
2. ಕನ್ನಡ ಜೈನ್ ಭಕ್ತಿ ಗೀತೆಗಳು – ಶ್ರೀಮತಿ ಪಿ. ವಿಲಾಸ್‌ಕುಮಾರಿ ಶರ್ಮಾ
3. ರತ್ನಾಕರನ ಹಾಡುಗಳು – ಶ್ರೀ ಹಂಪಾ ನಾಗರಾಜಯ್ಯ, ಶ್ರೀ ಎ.ಆರ್. ನಾಗರಾಜ್, ಶ್ರೀ ಪ್ರತಾಪ್ ಕುಮಾರ್ ಟೋಲಿಯಾ, ಶ್ರೀಮತಿ ಇಂದೂ ವಿಶ್ವನಾಥ್, ಶ್ರೀಮತಿ ರತ್ನಮಾಲಾ ಪ್ರಕಾಶ್
4. ಕರ್ನಾಟಕ ದರ್ಶನ – ಶೋಭಾದೇವಿ, ಎಂ. ವಿ. ಅನಂತಕುಮಾರ್, ಇಂದೂಮತಿ ಜೈಪಾಲ್, ಸುಬ್ರತೋ ಮಿತ್ರಾ, ಪುಷ್ಪಲತಾ, ಸುಮಿತ್ರಾ ಟೋಲಿಯಾ, ಕು. ವಂದನಾ ಟೋಲಿಯಾ, ಪ್ರತಾಪ್‌ಕುಮಾರ್ ಟೋಲಿಯಾ, ವಿ.ಬಿ. ಕಾಯರ್
5. ಬಾಹುಬಲಿ ಸ್ತುತಿ – ಪ್ರೊ. ಪ್ರತಾಪ್ ಕುಮಾರ್ ಟೋಲಿಯಾ, ಶ್ರೀಮತಿ ಸುಮಿತ್ರಾ ಟೋಲಿಯಾ, ಕು. ವಂದನಾ ಟೋಲಿಯಾ, ವಿಜಯಶ್ರೀ, ಶ್ರೀಮತಿ ಪಿ. ವಿಲಾಸ್ ಕುಮಾರಿ ಶರ್ಮಾ
6. ಕನ್ನಡ ಜಾನಪದ ಗೀತೆ – ಕನ್ನಡ ಜಾನಪದ ಗೀತೆಗಳು – ಕೆ. ಯುವರಾಜ್, ವೇಣುಗೋಪಾಲ್ (ಹಾಡುವವರು ಹಾಗೂ ಫ್ಲೂಟ್ ನುಡಿಸುವವರು)
7. ಬಾಹುಬಲಿ ದರ್ಶನ್ (ವಿಸಿಡಿ ಮತ್ತು ಡಿವಿಡಿ) – ಪ್ರೊ. ಪ್ರತಾಪ್ ಕುಮಾರ್, ಶ್ರೀಮತಿ ಸುಮಿತ್ರಾ ಟೋಲಿಯಾ, ಚಿನ್ಮಯೀ.

ದೊರೆಯುವ ಸ್ಥಳ :

**ಮೆ|| ವರ್ಧಮಾನ್ ಭಾರತಿ ಇಂಟರ್‌ನ್ಯಾಷನಲ್ ಫೌಂಡೇಷನ್,**

ಪ್ರಭಾತ್ ಕಾಂಪ್ಲೆಕ್ಸ್, ಬೆಂಗಳೂರು-560009.

ದೂರವಾಣಿ : 22251552, 26667882

ಈ ದಿನ ! ಈ ದಿನದ ಮಂಗಳ ಪ್ರಭಾತ !!

ವರ್ತಮಾನದ ಈ ಸುವರ್ಣಕ್ಷಣ !!!

ಆದ್ದರಿಂದಲೇ ಭಗವಾನ್ ಮಹಾವೀರರು ಕಳೆಯುತ್ತಿರುವ ಅಮೂಲ್ಯ ಕ್ಷಣಗಳನ್ನು - 'ಇಣಮೇವ ಖಣಂ ವಿಯಾಣಿಯಾ' ಎಂಬ ಸೂತ್ರರೂಪದ ವಾಕ್ಯವನ್ನು ವರದಾನವಾಗಿ ಕೊಟ್ಟಿರುತ್ತಾರೆ. ಇದರ ಅರ್ಥ - 'ನಮ್ಮ ಸ್ವಂತ ಸಮಯ (ಸ್ವ-ಕಾಲ) : ವರ್ತಮಾನದ ಸುವರ್ಣ ಕ್ಷಣಗಳು' ಎಂದು.

ಈ ಪುಷ್ಪಮಾಲಾ ಪುಸ್ತಕದಲ್ಲಿ, ಈ ಯುಗದ ಮಹಾನ್ ಸತ್ಪುರುಷರೂ, ಜ್ಞಾನಿಗಳೂ ಆದ ಶ್ರೀಮದ್ ರಾಜಚಂದ್ರಜೀಯವರು ಸ್ವಕಾಲದ ಮಹತ್ವವನ್ನು ಒತ್ತಿ ಹೇಳಿದ್ದಾರೆ. ಅವರು ತಮ್ಮ 'ಅಪ್ರಮಾದ ಯೋಗ' ದ ಸಾಧನೆಯ ಮೂಲಕ ಕಳೆಯುತ್ತಿರುವ ವರ್ತಮಾನದ ಪ್ರತಿಯೊಂದು ಕ್ಷಣಗಳನ್ನು ಪೂರ್ಣರೀತಿಯಲ್ಲಿ ಉಪಯೋಗಿಸುವ, ಉತ್ತಮ ಮಾರ್ಗವನ್ನು, ಉತ್ತಮ ರೀತಿಯನ್ನು ತೋರಿಸಿಕೊಟ್ಟಿದ್ದಾರೆ. 'ಸಮಯಂ ಗೋಯಮ್ ! ಮಾ ಪಮಾಯಏ' ಅಂದರೆ 'ಹೇ ಗೌತಮ ! ಸಮಯವನ್ನು, ಪ್ರಮಾದದಿಂದ ವ್ಯರ್ಥಮಾಡಬೇಡ' ಎಂಬ ಭಗವಾನ್ ಮಹಾವೀರರು ತಮ್ಮ ಶಿಷ್ಯಶ್ರೇಷ್ಠನಾದ ಗಣಧರ ಗೌತಮನಿಗೆ ನೀಡಿರುವ ದಿವ್ಯವಾದ ಆಜ್ಞೆ (ಎಚ್ಚರಿಕೆಯ ನುಡಿ) ಯನ್ನು ಸ್ಮರಿಸಿ, ಅವರು ಇಲ್ಲಿ ಸ್ವಕಾಲದ ಸದುಪಯೋಗವನ್ನು ಪ್ರತಿಪಾದಿಸಿದ್ದಾರೆ.

ಬೆಳಿಗ್ಗೆ ನಿದ್ರೆಯಿಂದ ಎಚ್ಚರಗೊಂಡಾಗ, ಪುಷ್ಪಮಾಲಾದ ಪ್ರಥಮ ಪುಷ್ಪವಾದ - 'ರಾತ್ರಿ ಕಳೆದಿದೆ, ಮುಂಜಾನೆಯಾಗಿದೆ. ನಿದ್ರೆಯ ಹಿಡಿತದಿಂ[illegible] ಮುಕ್ತರಾಗಿದ್ದೇವೆ. ಈಗ ಅನಾದಿಯಿಂದಲೂ ಬಂದಿರುವ ಅಜ್ಞಾನವೆಂಬ [illegible] (ಭಾವ ನಿದ್ರೆ) ಯಿಂದ ಮುಕ್ತರಾಗಲು ಪ್ರಯತ್ನಿಸೋಣ' ಎಂಬ ಸುವರ್[illegible] ವಾಕ್ಯವನ್ನು ಜ್ಞಾಪಿಸಿಕೊಳ್ಳಿ, ಅದರ ಬಗ್ಗೆ ಚಿಂತನೆಯನ್ನು ಮಾಡಿ.

ಪ್ರಮಾದ (ಅಜ್ಞಾನ) ವೆಂಬ ಭಾವ ನಿದ್ರೆಯನ್ನು ತ್ಯಜಿಸುತ್ತಾ, ಈ ಪುಷ್ಪಮಾಲಾದಲ್ಲಿರುವ ಪ್ರತಿಯೊಂದು ಹೂಗಳ ಸುಗಂಧದ ಆನಂದವನ್ನು ಸವಿಯುತ್ತಾ ಇಂದಿನ ದಿನವನ್ನು ಹಾಗೂ ಇಡೀ ಜೀವನವನ್ನು ಧನ್ಯವಾಗಿಸಿಕೊಳ್ಳಿ.

ಈ ಅಪ್ರಮತ್ತ ಭಾವದ ಪುಷ್ಪಮಾಲಾ ಸಂದೇಶದಿಂದ ತಮ್ಮೆಲ್ಲರ ಇಂದಿನ ದಿನ ಮತ್ತು ಜೀವನ ಮಂಗಳಮಯವಾಗಲಿ.

ಓಂ ಶಾಂತಿಃ ಶಾಂತಿಃ ಶಾಂತಿಃ

ಜಿನ ಭಾರತಿ